# ನೇಸರು

## ತಿಂಗಳೋಲೆ

## ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE Vol XXIII - 6 ಜೂನ್ 2005

### ಈ ಸಂಚಿಕೆಯಲ್ಲಿ

ಅಸೋಸಿಯೇಶನ್‌ನಲ್ಲಿ :

| | | |
|---|---|---|
| ಅಕ್ಷಯ ತೃತೀಯ ಕಾರ್ಯಕ್ರಮ | | 2 |
| Forthcoming Programmes | | 2 |
| ಅಮೇರಿಕದ ಆದಿನಿವಾಸಿಗಳು - ಮಯರು | ● ಎಂ.ಎ.ಎನ್. ಪ್ರಸಾದ್ | 3 |
| ಡಾ। ರಾ. ಗಣೇಶ್‌ರವರ ಉಪನ್ಯಾಸಗಳು (ಭಾಗ - 2) | ಸಂಗ್ರಹ : ಶ್ರೀಮತಿ ಸುಮನ್ ಕೆ. ಚಿಪ್ಳೂಣ್ಕರ್ | 5 |
| SUBHAASHITAANI | ● **Mrs. Janaki S. Mani** | 8 |
| ಸಮಾಧಿ - ಯೋಗಶಾಸ್ತ್ರವು ತಿಳಿಸಿದಂತೆ | ● ವಾಸುದೇವ ಕಾಣೆಮಾರ್ | 9 |
| ಮಹಾರಾಷ್ಟ್ರದ ಭೌಗೋಳಿಕ ವ್ಯಾಪ್ತಿ, ಪ್ರಾಚೀನತೆ - 2 | ● ಡಾ. ಜಿ.ಎನ್. ಉಪಾಧ್ಯ | 11 |
| ಸುತ್ತಮುತ್ತ | | 12 |


**Rs. 5/-**

**The Mysore Association, Bombay**
393, Bhaudaji Road, Matunga, Mumbai - 400 019.
Phone : 2402 4647, 2403 7065 • Fax : 2401 0574
E-mail : karunadu@bom5.vsnl.net.in

ಅಸೋಸಿಯೇಶನ್‌ನಲ್ಲಿ

# ಅಕ್ಷಯ ತೃತೀಯ ಕಾರ್ಯಕ್ರಮ

ಪ್ರತಿ ತಿಂಗಳಿನಲ್ಲಿ 2 ಪಕ್ಷಗಳಿವೆ. ಶುಕ್ಲಪಕ್ಷ 15 ದಿವಸ, ಕೃಷ್ಣಪಕ್ಷ 15 ದಿವಸ. ಪಾಡ್ಯ, ಬಿದಿಗೆ, ತದಿಗೆ... ಎಂದು ಪ್ರತಿ ದಿವಸಕ್ಕೂ ಒಂದು ವಿಶೇಷತೆ ಇದೆ. ಪಾಡ್ಯ ಎಂದರೆ ನೆನಪಾಗುವುದು ಯುಗಾದಿ ಪಾಡ್ಯ, ದೀಪಾವಳಿ ಪಾಡ್ಯ ಎಂದು, ಹಾಗೆಯೇ ಬಿದಿಗೆ ಎಂದಾಗ ಭಾವ ಬಿದಿಗೆ, ಅಕ್ಷಯ ತೃತೀಯ, ಗಣೇಶನ ಚತುರ್ಥಿ ನಾಗಪಂಚಮಿ. ಹೀಗೆ ಅಕ್ಷಯ ತೃತೀಯ ಬಹಳ ವಿಶೇಷವಾದ ದಿನ. ಅಂದು ಶ್ರೀಕೃಷ್ಣನು ದ್ರೌಪದಿಗೆ ಅಕ್ಷಯಪಾತ್ರೆ ಇತ್ತ ದಿವಸವೆಂಬ ಪ್ರತೀತಿ ಇದೆ. ಎಲ್ಲ ಶುಭ ಕಾರ್ಯಗಳಿಗೂ ಬಹಳ ಪ್ರಶಸ್ತವಾದ ದಿನ ಜೈನರು, ತಮ್ಮ ಉಪವಾಸವನ್ನು ಸಮಾಪ್ತಿ ಮಾಡುವ ದಿನ.

ಇಂದಿನಿಂದ ಪ್ರತಿ ವರ್ಷವೂ ಅಕ್ಷಯ ತದಿಗೆಯಂದು ಗಣಪತಿಗೆ ವಿಶೇಷ ಪೂಜೆಯನ್ನು ಸಲ್ಲಿಸಲಾಗುತ್ತದೆ. ಈ ವರ್ಷ ಮೇ 11ರಂದು ಅಕ್ಷಯ ತೃತೀಯವಾಗಿದ್ದರಿಂದ ಅಂದು ಗಣಪತಿಯ ಪೂಜೆ ಅಭಿಷೇಕ, ಹೋಮ, ಸಹಸ್ರ ನಾಮಾರ್ಚನೆ ಎಲ್ಲವನ್ನೂ ಮಾಡಲಾಯಿತು. ಶ್ರೀಮತಿ ಮತ್ತು ಶ್ರೀ ಎಚ್. ಆರ್. ವಸಂತ್ ದಂಪತಿಗಳು ಕಳಿತು ಪೂಜಾ ವಿಧಿಗಳನ್ನು ಶಾಸ್ತ್ರಿಗಳ ನೇತೃತ್ವದಲ್ಲಿ ನಡೆಸಿಕೊಟ್ಟರು. ಪೂಜಾ ಮಂಗಳಾರತಿಯ ನಂತರ ಲಘು ಭೋಜನದೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು. ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರು ಹಾಜರಿದ್ದರು.



*ಅಸೋಸಿಯೇಶನ್‌ನಲ್ಲಿ ಮೇ ೧೧ರಂದು ಅಕ್ಷಯ ತೃತೀಯದ ದಿನ ಗಣಪತಿ ಪ್ರತಿಷ್ಠಾಪನೆಯ ಪ್ರಯುಕ್ತ ನಡೆಸಿದ ಹೋಮದಲ್ಲಿ ಶ್ರೀಮತಿ ರಮಾ ಮತ್ತು ಶ್ರೀ ವಸಂತ ದಂಪತಿಗಳು ಪೂರ್ಣಾಹುತಿಯನ್ನು ಕೊಡುತ್ತಿದ್ದಾರೆ.*



ಅಸೋಸಿಯೇಶನ್‌ನಲ್ಲಿ ಅಕ್ಷಯ ತೃತೀಯದಂದು ಶ್ರೀಮತಿ ರಮಾ ಮತ್ತು ಶ್ರೀ ವಸಂತ ಅವರು ಗಣಪತಿ ಪೂಜೆ ನಡೆಸಿ, ಮಂಗಳಾರತಿ ಎತ್ತುತ್ತಿದ್ದಾರೆ.

**THE MYSORE ASSOCIATION, BOMBAY**

**Forthcoming Programmes**

On Saturday 25th June 2005
7.00 p.m. Sankashti Pooja
at Ground Floor Lounge

## MATRIMONIAL

Wanted Good Looking, Homely, Fairly Educated girl for a boy 32 yrs, from Doctor's family. She should have family values and adoptable. Horoscope not much needed. Girl would be given good care.

Contact: Dr. V.L. Kikeri
Ph: 2570 0151

***

Wanted suitable Brahmin boy from respected family with decent job, for Brahmin girl (Kannada Speaking) working as teacher (B.A) 25 yrs, VishwaMITRA Gotra, Swati Nakshatra, 5 feet tall.

Please Contact: Mrs. Rao
Ph: 2635 5881

***

**GROOM WANTED**

Kannada/ Telugu, Brahmin Boy wanted For Matrimonial alliance for a beautiful girl M.A., 23/5'1" MNC employed. Boy to be highly educated - US job also welcome

Contact: Mr. M.R. Surendra
Ph: 022-2857 0678

***

Wanted Good Looking, Homely, Fairly Educated girl for a boy 24 yrs. Working in Shakti Hardware Company.

Contact : Mr. M. V. Devarajan
Ph: 2431 2596

# ಅಮೇರಿಕದ ಆದಿನಿವಾಸಿಗಳು - ಮಯರು

- ಎಂ.ಎ.ಎನ್. ಪ್ರಸಾದ್

ಅಮೇರಿಕವೆಂದರೆ ಸಾಮಾನ್ಯವಾಗಿ ನಮ್ಮ ಮನಸ್ಸಿನಲ್ಲಿ ಮೂಡುವುದು ಇಂದಿನ ಉತ್ತರ ಅಮೇರಿಕ, ಕೊಲಂಬಸ್ ಎಂಬಾತನು ಅಮೇರಿಕವನ್ನು 16ನೆಯ ಶತಮಾನದಲ್ಲಿ ಕಂಡುಹಿಡಿದನೆಂದೂ, ಇದಾದನಂತರ ಪಾಶ್ಚಾತ್ಯರು ಅಮೇರಿಕಕ್ಕೆ ವಲಸೆ ಹೋಗಿ ಅಲ್ಲಿನ ನಿವಾಸಿಗಳನ್ನು ನಿರ್ಮೂಲ ಮಾಡಿ ಆ ನಾಡನ್ನು ತಮ್ಮದಾಗಿಸಿಕೊಂಡರು ಎಂದೂ ನಾವೆಲ್ಲರೂ ಓದಿದ್ದೇವೆ. ಈ ಕೊಲಂಬಸ್ ಎಂಬಾತನು ಅಮೇರಿಕಕ್ಕೆ ಹೋಗುವುದಕ್ಕೆ ಮುಂಚೆ ಅಲ್ಲಿಯಾರು ವಾಸವಾಗಿದ್ದರು? ಅವರ ಭಾಷೆ ಯಾವುದು? ಅವರ ಸಂಸ್ಕೃತಿ ಹೇಗಿತ್ತು? ಈ ವಿಷಯಗಳ ಬಗ್ಗೆ ಸಾಮಾನ್ಯ ಜನರಿಗೆ ಹೆಚ್ಚಾಗಿ ತಿಳಿದಿಲ್ಲ. ಕಾರಣ ಇಷ್ಟೇ. ಈ ವಿಷಯಕ್ಕೆ ಹೆಚ್ಚಿನ ಮಹತ್ವ ಕೊಡುವುದು ಅಮೇರಿಕನ್ನರಿಗೆ ಮತ್ತು ಪಾಶ್ಚಾತ್ಯರಿಗೆ ಬೇಕಾಗಿರಲಿಲ್ಲ.

ಅಮೇರಿಕಾ ಖಂಡದ ಅತಿ ಹಳೆಯ ನಿವಾಸಿಗಳಲ್ಲಿ ಮಯರು ಮುಖ್ಯವಾದ ಸ್ಥಾನವನ್ನು ಪಡೆಯುತ್ತಾರೆ. ಇವರ ಮೂಲವನ್ನು ಕ್ರಿ.ಪೂ. 2600ಕ್ಕೆ ಗುರುತಿಸಲಾಗಿದೆ. ಯುಕಟಾನ್ (Yucatan) ನಿಂದ ಬಂದ ಇವರು ಇಂದಿನ ದಕ್ಷಿಣ ಮೆಕ್ಸಿಕೊ (Southrern Mexico), ಗ್ವಾಟೆಮಾಲ (Guatemala), ಪಶ್ಚಿಮ ಹೊಂಡುರಾ (West Honduras), ಎಲ್ ಸಾಲ್ವದೋರ್ (EL Salvador), ಮತ್ತು ಉತ್ತರ ಬೇಲಿಜ್ (Northern Belize) ಪ್ರಾಂತ್ಯಗಳಲ್ಲಿ ನಿವಾಸಿಸುತ್ತಿದ್ದರು. ಕ್ರಿ.ಶ. 250 ಹೊತ್ತಿಗೆ ಇವರು ಬಹಳ ಪ್ರಾಮುಖ್ಯರಾದರು.

ಮಯರನ್ನು ಮುಖ್ಯವಾಗಿ ಪರಿಗಣಿಸಲು ಅವರಿಗೆ ತಿಳಿದಿದ್ದ ಖಗೋಳ ಶಾಸ್ತ್ರ, ಕಾಲನಿರ್ಣಯ ಶಾಸ್ತ್ರ (calendirical system), ಹೀರೋಗ್ಲಿಫಿಕ್ (Heiroglyphics), ಬರಹದ ಕಲೆ, ಅತಿಯಾದ ಅಲಂಕಾರಗಳಿಂದ ಕೂಡಿದ ದೇವಾಲಯಗಳು, ಪಿರಮಿಡ್‌ಗಳು, ವೀಕ್ಷಣಾಲಯಗಳು ಇತ್ಯಾದಿ ಶಿಲ್ಪಗಳನ್ನು ಕಟ್ಟುವ ಸಾಮರ್ಥ್ಯ ಮತ್ತು ಅದಕ್ಕೆ ಬೇಕಾದ ವಾಸ್ತುಶಿಲ್ಪ ಕಲೆ, ಇವುಗಳೇ ಕಾರಣ, ಇದಲ್ಲದೆ ಮಯರು ಕೃಷಿ ವ್ಯವಸಾಯದಲ್ಲಿಯೂ ಪರಿಣಿತರಾಗಿದ್ದರು. ಅಲ್ಲಿನ ಒಣಜಮೀನಿನಲ್ಲಿ ನೀರಿಗೆ ಕಷ್ಟವಾದ್ದರಿಂದ ಅವರು ಮಳೆಯನೀರನ್ನು ಶೇಕರಿಸಿಡಲು ನೆಲದಡಿಯಲ್ಲಿ ಕೊಳಗಳನ್ನು ಮಾಡಿಕೊಂಡಿದ್ದರು. ಇವರು ಮಡಿಕೆ ಮಾಡುವುದು, ಬಟ್ಟೆ ನೇಯುವುದು ಇತ್ಯಾದಿ ಕೆಲಸಗಳಲ್ಲಿಯೂ ಪರಿಣಿತರಾಗಿ ದ್ದರು ಮತ್ತು ತಮ್ಮ ಸರಕುಗಳನ್ನು ಇತರರಿಗೆ ವ್ಯಾಪಾರಮಾಡಲು ಬೇಕಾದ ರಸ್ತೆಗಳನ್ನೂ ಮಾಡಿಕೊಂಡಿದ್ದರು. ಈ ಎಲ್ಲಾ ಸಾಧನೆಯನ್ನೂ ಇವರು ಲೋಹದ ಆಯುಧ ಗಳಿಲ್ಲದೆಯೇ ಸಾಧಿಸಿದ್ದರು ಎಂಬುದನ್ನು ನಾವು ನೆನಪಿನಲ್ಲಿಡಬೇಕು.

ಅನೇಕ ಚರಿತ್ರಕಾರರು ಮಯರ ಮೂಲಜರು 20,000 ವರ್ಷಗಳ ಹಿಂದೆ ಪೂರ್ವದಿಂದ ಬೆರಿಂಗ್ ಸ್ಟ್ರೈಟ್ (Bering Strait), ದಾಟಿಕೊಂಡು ಬಂದರೆಂದು ಹೇಳುತ್ತಾರೆ. ಹೀಗೆ ವಲಸೆ ಬಂದ ಬೇಟೆಗಾರರು ಹಾಗೂ ಅಲೇಮಾರಿಗಳು ಮೆಕ್ಸಿಕೋ ಪ್ರಾಂತ್ಯದಲ್ಲಿ ನೆಲೆ ನಿಂತರು. ಇಲ್ಲಿ ಕಳೆದ 5,000 ವರ್ಷಗಳ ಹಿಂದೆಯೇ ಕಂಡು ಬಂದಿರುವ ಕೃಷಿ ಪದ್ಧತಿ, ಮಡಕೆಯ ಅವಶೇಷಗಳು, ಕಲ್ಲಿನ ಆಯುಧಗಳು, ಇವೆಲ್ಲಾ ಇದಕ್ಕೆ ಸಾಕ್ಷಿಗಳೆಂದು ಇವರ ವಾದ.

ಮಯರ ಚರಿತ್ರೆಯ ಕಾಲವನ್ನು 3 ಅಂಗವಾಗಿ ವಿಂಗಡಿಸಿದ್ದಾರೆ. ಕ್ರಿ.ಪೂ. 1500ರಿಂದ 300ರ ವರೆಗೆ Pre-Classic Period ಎಂದೂ, ಮತ್ತು ಕ್ರಿ.ಶ. 1000ರಿಂದ 1500ರ ವರೆಗೆ Post Classic Period ಎಂದೂ ಕರೆಯುತ್ತಾರೆ. ಮಯರಿಗೆ ಮುಂಚೆ, ಕ್ರಿ.ಪೂ. 1500ರ ವರೆಗೆ, ಅಮೆರಿಕ ಖಂಡದ ತೀರ ಪ್ರದೇಶದಲ್ಲಿದ್ದ ಒಲ್ಮೆಕ್ಸ್ (Olmecs) ಅವರಿಂದ ಮಯರು ಅನೇಕ ವಿಷಯಗಳನ್ನು ಕಲಿತುಕೊಂಡರೆಂದು ಹೇಳಲಾಗುತ್ತದೆ. ಆದರೆ ಒಲ್ಮೆಕ್ಸರಿಗೂ ಮಯರಿಗೂ ಇದ್ದ ಸಂಬಂಧವೇನು? ಮಯರು ಒಲ್ಮೆಕ್ಸ್ ವಂಶಜರೆ? ಎಂಬುದಕ್ಕೆ ಇನ್ನೂ ಸ್ಪಷ್ಟವಾದ ಉತ್ತರ ಸಿಕ್ಕಿಲ್ಲ.

ಮಯರು ಯುಕಟಾನ್ ಪ್ರದೇಶವನ್ನು ಪಶ್ಚಿಮ ದಿಕ್ಕಿನಿಂದ ಬಂದು ಸೇರಿದರೆಂದು ಭಾವಿಸಲಾಗಿದೆ. ಪ್ರತಿಯೊಂದು ಹಳೆಯನಾಡಿನಲ್ಲೂ, ಅಲ್ಲಿನ ಇತಿಹಾಸ ಮತ್ತು ಜಾನಪದ ಕತೆಗಳು ಬೆರೆತು ಹೋಗುವುದರಿಂದ ನಿರ್ದಿಷ್ಟವಾದ ಆಧಾರಗಳು ಸಿಗುವುದು ಕಷ್ಟ. ಮಯರ ಮೊದಲ ನಾಯಕ ಇಜ್ಜಾಮ್ನ (Itzarmna)ವನ್ನು ಅವರು ಸೂರ್ಯ ದೇವನೆಂದೇ ಭಾವಿಸಿದ್ದರು. ಇವನ ನೇತೃತ್ವದಲ್ಲಿ ಮಯರು ಕಡಲಾಚೆಯ, ದೂರದ ಪೂರ್ವದಿಕ್ಕಿನ ಪ್ರದೇಶದಿಂದ ಬಂದರೆಂದೂ, ಆ ಸಮಯದಲ್ಲಿ, ಕಡಲಿನ ನೀರು ಎರಡು ಪಾಲಾಗಿ ಮಧ್ಯದಲ್ಲಿ ಮಾರ್ಗವುಂಟಾಯಿತೆಂದೂ ಇವರ ದಂತಕಥೆಗಳು ಹೇಳುತ್ತವೆ.

ಇತಿಹಾಸದ ಪ್ರಕಾರ, ಕುಕುಲ್ಕಾನ್ (Kukulcan) ಎಂಬ ಅರ್ಚಕ ಮತ್ತು ಗುರುವು ಮಯರ ರಾಜ್ಯವನ್ನು ಸ್ಥಾಪಿಸಿದನೆಂದು ಹೇಳಲಾಗುತ್ತದೆ. ಇದು ಇವರ ಎರಡನೆಯ ವಲಸೆ ಎಂದೂ, ಇದು ಸುಮಾರು ಕ್ರಿ.ಶ. 2ನೆಯ ಶತಮಾನದ ಸಮಯದಲ್ಲಿ ನಡೆದಿರಬೇಕೆಂದೂ ಇತಿಹಾಸಕಾರರು ಅಭಿಪ್ರಾಯ ಪಡುತ್ತಾರೆ. ಇವನ ಕಾಲದಲ್ಲಿ ಮಯರು ನಾಲ್ಕು ಪಂಗಡಗಳಾಗಿ ವಿಂಗಡಿಸಲ್ಪಟ್ಟಿದ್ದರೆಂದೂ, ಅವರುಗಳು ಅಕ್ಕಪಕ್ಕದ ನಾಲ್ಕು ಪ್ರಾಂತ್ಯಗಳಲ್ಲಿ ವಾಸಿಸುತ್ತಿದ್ದರೆಂದೂ ತಿಳಿದುಬಂದಿದೆ. ಇವರನ್ನು ಅನೇಕ ರಾಜ ಮನೆತನಗಳು ಆಳುತ್ತಿದ್ದವು. ಇವಲ್ಲಿ ಕುಕುಲ್ಕಾನನ ಮನೆತನಕ್ಕೆ ಪ್ರಥಮ ಸ್ಥಾನವಾಗಿತ್ತು. ಇವರು ಮಯನ್ಸ್ ಪಾನ್ (Mayanspan) ಎಂಬ ಪಟ್ಟಣದಿಂದ ರಾಜ್ಯವಾಳುತ್ತಿದ್ದರು. ಆ ಕಾರಣದಿಂದ ಈ ನಗರವು ಮಯರ ಇಡೀ ಪ್ರಾಂತ್ಯಕ್ಕೇ ರಾಜಧಾನಿಯಾಯಿತು.

ಕ್ರಿ.ಶ. ಹನ್ನೊಂದನೆಯ ಶತಮಾನದವರೆಗೂ ಇವರ ರಾಜ್ಯವು ಈ ರೀತಿಯೇ ನಡೆಯಿತು. ನಂತರ ಪ್ರಾಂತೀಯ ರಾಜರು /ಮುಖಂಡರು ಪ್ರಾಬಲ್ಯರಾಗಿ ರಾಜನಿಗೆ ವಿರುದ್ಧವಾಗಿ ದಂಗೆಯೆದ್ದರು. ಮಯನ್ಸ್‌ಪಾನ್ ನಗರವು ನಾಶವಾಯಿತು. ರಾಜ್ಯಾಡಳಿತವು ಉಕ್ಸ್ಮಾಲ್ (Uxmal) ಪ್ರಾಂತ್ಯದ ಟುಟುಲ್ಕ್ಸಿಯು (Tutul - Xiu) ಅವರ ಕೈ ಸೇರಿತು.

ಕ್ರಿ.ಶ. 15ನೆ ಶತಮಾನದ ವೇಳೆಗೆ ದಂಗೆಗಳಾಗಿ, ಪುನರ್ನಿರ್ಮಾಣ ವಾದ ಮಯಾನ್ಸ್ ಪಾನ್ ನಗರವು ಮತ್ತೆ ನಾಶವಾಯಿತು. ರಾಜ ಕುಟುಂಬವು ಒಡೆದು ಅನೇಕ ಚಿಕ್ಕಪುಟ್ಟ ರಾಜ್ಯಗಳು ಹುಟ್ಟಿಕೊಂಡವು. ಮಯರನ್ನು ಸ್ಪೈನಿನ ನಿವಾಸಿಗಳು ಸೋಲಿಸುವ ಸಮಯಕ್ಕೆ ಇವಲ್ಲಿ ಕೇವಲ 18 ರಾಜ್ಯಗಳು ಉಳಿದಿದ್ದವು.

**ಮಯರ Classic Period (ಕ್ರಿ.ಪೂ. 300ರಿಂದ ಕ್ರಿ.ಶ. 900ರ ವರೆಗೆ)**

ಮಯರ ಕಲೆ ಮತ್ತು ಸಂಸ್ಕೃತಿಯ ಸಾಧನೆಗಳು ಹೊರಬಂದದ್ದು ಈ ಕಾಲದಲ್ಲಿ. ಮಯರು ಕ್ಲಿಷ್ಟವಾದ, ಅನೇಕ ವರ್ಗಗಳು, ವೃತ್ತಿ ಉಳ್ಳ ಸಮಾಜ

ಪದ್ಧತಿಯನ್ನು ಅಳವಡಿಸಿಕೊಂಡಿದ್ದರು. ರಾಜನಿಂದ ಆಳಲ್ಪಟ್ಟ ಸರ್ಕಾರವು ಕೇಂದ್ರವಾಗಿತ್ತು. ಅದು ಅನೇಕ ಪ್ರಾಂತ್ಯಗಳನ್ನು ತನ್ನ ಅಧೀನದಲ್ಲಿ ಆಳುತ್ತಿತ್ತು. ಈ ಪ್ರಾಂತ್ಯಗಳ ಎಲ್ಲೆಗಳು ಸ್ಪಷ್ಟವಾಗಿ ಗುರುತಿಸಲ್ಪಟ್ಟಿದ್ದವು. ಅಗ್ಗಾಗ್ಗೆ, ಆಯಾ ಪ್ರಾಂತ್ಯದ ಸೋಲು ಗೆಲುವುಗಳನ್ನು ಅವಲಂಬಿಸಿ, ಈ ಎಲ್ಲೆಗಳು ಬದಲಾಗುತ್ತಿದ್ದವು. ಮೆಕ್ಸಿಕೊ (Mexico), ಗ್ವಾಟೆಮಾಲ (Guatemala), ಬೆಲೀಜ್ (Belize), ಹೊಂಡುರಾಸ್ (Honduras), ಮತ್ತು ಎಲ್‌ಸಾಲ್ವಡೋರ್ (El Salvador) ಇವರ ರಾಜ್ಯದ ಪ್ರಾಂತ್ಯಗಳಾಗಿದ್ದವು. ಇವುಗಳಲ್ಲಿ ಗ್ವಾಟೆಮಾಲಾವಿನ ಟಿಕ್ಸಾಲ್ (Tixal), ಮೆಕ್ಸಿಕೋವಿನ ಪಲೆನ್ಕ್ವೆ (Pelenque) ಮತ್ತು ಯಾಕ್ಸಿಚಿಲಾನ್ (Yaxichilan), ಹೊಂಡುರಾಸಿನ ಕೊಪಾನ್ (Copan) ಮತ್ತು ಕ್ವಿರಿಗುವ (Quirigua), ಮುಖ್ಯ ನಗರಗಳಾಗಿದ್ದವು. ಮಧ್ಯ ಮೆಕ್ಸಿಕೋ ಮತ್ತು ಬೆಲೀಜ್ ಪ್ರಾಂತ್ಯಗಳಲ್ಲೇ ಹೆಚ್ಚು ಮಯರು ವಾಸವಾಗಿದ್ದರು. ಕ್ರಿ.ಶ. 9ನೇ ಶತಮಾನದಲ್ಲಿ ಈ ಪ್ರದೇಶಗಳ ಜನಸಂಖ್ಯೆ ಬಹಳ ಕಡಿಮೆಯಾಯಿತು. ಇದಕ್ಕೆ ಆ ಸಮಯದಲ್ಲಿ ಆದ ಬರ, ಕ್ಷಾಮ, ವ್ಯಾಪಾರದ ಪತನ, ಅರಾಜಕತೆ, ಇತ್ಯಾದಿಗಳೇ ಕಾರಣವೆಂದು ಹೇಳುತ್ತಾರೆ.

**ಮಯರ Post Classic Period**
**(ಕ್ರಿ.ಶ. 1000ರಿಂದ 1500ರ ವರೆಗೆ)**

ಈ ಕಾಲದಲ್ಲಿ ಯುಕಟಾನ್ ಪ್ರದೇಶಕ್ಕೆ ಬಂದರು, ಅವರ ಸಾಧನೆಗಳು Classic Period ನಷ್ಟು ಉತ್ತಮವಾಗಿಲ್ಲದಿದ್ದರೂ, ಅವರು ಈ ವೇಳೆಗೆ ತಮ್ಮದೇ ಆದ ಒಂದು ಶೈಲಿಯನ್ನು ಬೆಳೆಸಿಕೊಂಡಿದ್ದರು.

ಮಯರ ಕಲಾಕೃತಿಗಳನ್ನು ಸಿರಿವಂತವೆಂದು ಪರಿಗಣಿಸುವುದಕ್ಕೆ ಅವರು ಉಪಯೋಗಿಸುತ್ತಿದ್ದ ಅನೇಕ ಕ್ಲಿಷ್ಟವಾದ ವಿನ್ಯಾಸಗಳ ಮತ್ತು ಅವಲ್ಲಿ ತರುತ್ತಿದ್ದ ವಿವಿಧವಾದ ಭಾವಗಳೇ ಕಾರಣ. ಸುಣ್ಣದ ಕಲ್ಲು, ಗಾರೆ ಇವರು ಉಪಯೋಗಿಸುತ್ತಿದ್ದ ಪದಾರ್ಥಗಳಲ್ಲಿ ಮುಖ್ಯವಾದವು. ಮಯರ ಕಟ್ಟಡಗಳು ಕಲ್ಲಿನಲ್ಲಿ ಕಡೆದ ಮತ್ತು ಗಾರೆಯಲ್ಲಿ ಮಾಡಿದ ಸುಂದರ ಅಲಂಕಾರಗಳಿಂದ ಕೂಡಿದ್ದವು. ಆ ಪ್ರದೇಶದಲ್ಲಿ ಹೇರಳವಾಗಿ ಸಿಗುತ್ತಿದ್ದ ಸುಣ್ಣದಕಲ್ಲು, ಈ ರೀತಿಯ ಕಟ್ಟಡ ಸಾಮಗ್ರಿಯನ್ನು ಒದಗಿಸುತ್ತಿತ್ತು. ಈ ಕಾರಣದಿಂದ ಮಯರು ಭವ್ಯವಾದ ದೇಗುಲಗಳನ್ನೂ, ಪಿರಮಿಡ್ಡುಗಳನ್ನೂ ಕಟ್ಟಲಾಯಿತು. ಇವರ ವಾಸ್ತು ಶಿಲ್ಪ ಕಲೆಯು ಎಷ್ಟು ಉತ್ತಮ ಮಟ್ಟದ್ದಾಗಿತ್ತೆಂದರೆ ಇವರ ಕಟ್ಟಡಗಳಲ್ಲಿ ಗೋಡೆಗಳಿಗೆ ಗಾರೆ ಹಚ್ಚಿ, ಅಂದವಾಗಿ ಗೋಡೆಗಳಮೇಲೆ ಬಣ್ಣ ಬಣ್ಣದ ಬಿತ್ತಿ ಚಿತ್ರಗಳನ್ನು ಬರೆಯುತ್ತಿದ್ದರು. ಸೀಡರ್ ಮರದ ತೊಲೆಗಳನ್ನು ಉಪಯೋಗಿಸಿ ಮನೆಗಳಿಗೆ ಗಾರೆಯಿಂದ ತಾರಸಿಯನ್ನು ಕಟ್ಟುತ್ತಿದ್ದರು. ಕಟ್ಟಡಗಳಿಗೆ ಕಮಾನಾಗಿರುವ ಗೋಪುರಗಳನ್ನು ಕಟ್ಟುತ್ತಿದ್ದರು. ಪಿಂಗಾಣಿ, ಕಲ್ಲು, ಮೂಳೆ, ಕಪ್ಪೆಚಿಪ್ಪು ಮುಂತಾದ ವಸ್ತುಗಳನ್ನು ಉಪಯೋಗಿಸಿ ಅಲಂಕಾರದ ವಸ್ತುಗಳನ್ನೂ ಅಭರಣಗಳನ್ನೂ ತಯಾರಿಸುತ್ತಿದ್ದರು. ಬಟ್ಟೆಯಮೇಲೆ ಸುಂದರವಾದ ಅಲಂಕಾರವನ್ನು ಮಾಡುತ್ತಿದ್ದರು.

ಮಯರು ಎತ್ತರವಾದ ದೇವಾಲಯಗಳನ್ನು ಕಟ್ಟುತ್ತಿದ್ದರು. ಇವುಗಳ ಪ್ರಾಕಾರವು ವಿಶಾಲವಾಗಿರುತ್ತಿದ್ದವು. ಈ ದೇವಾಲಯಗಳಿಗೆ ನಾಲ್ಕು ದಿಕ್ಕಿನಲ್ಲೂ ಮೆಟ್ಟಿಲುಗಳು ಇರುತ್ತಿದ್ದವು. ಪ್ರತಿಯೊಂದು ದಿಕ್ಕಿನಲ್ಲೂ 91 ಮೆಟ್ಟಿಲುಗಳಿದ್ದು ಒಟ್ಟು 364 ಮೆಟ್ಟಿಲುಗಳಿದ್ದವು. ಪ್ರತಿಯೊಂದು ದಿಕ್ಕಿನ 91 ಮೆಟ್ಟಿಲುಗಳ ಎರಡು ಪಕ್ಕದಲ್ಲೂ 9 ತಾಣಗಳಿರುತ್ತಿದ್ದವು. ಈ ರೀತಿ, ಇವರ ದೇವಾಲಯ ಮತ್ತು ಪಿರಮಿಡ್ಡುಗಳಲ್ಲಿ ಇವರು ಅನುಸರಿಸುತ್ತಿದ್ದ ಪಂಚಾಂಗದ ಪ್ರಭಾವ ಎದ್ದು ಕಾಣುತ್ತಿದ್ದಿತು. (ವರ್ಷದಲ್ಲಿ 18 ತಿಂಗಳು, 364 ದಿನಗಳನ್ನು ಪ್ರತಿಂಬಿಸುವ 364 ಮೆಟ್ಟಿಲುಗಳು ಮತ್ತು 18 ತಾಣಗಳು)

ಮಯರ ಈ ಕಲಾಕೃತಿಗಳಿಗೆ ಇತಿಹಾಸಕಾರರು ಇಷ್ಟು ಪ್ರಾಮುಖ್ಯತೆ ಕೊಡುವುದಕ್ಕೆ ಕಾರಣ, ಇವನ್ನೆಲ್ಲ ಮಯರು ಲೋಹದ ಆಯುಧ, ಚಕ್ರ ಮತ್ತು ಹೇರು ಹೊರುವ ಪ್ರಾಣಿಗಳ ಉಪಯೋಗ ತಿಳಿಯದ ಕಾಲದಲ್ಲಿ ಮಾಡಿದ್ದರಿಂದ.

**ಮಯ ಅವನತಿ**

1503-04ರಲ್ಲಿ, ತನ್ನ ಎರಡನೆಯ ಪ್ರವಾಸದಲ್ಲಿ ಕೊಲಂಬಸ್‌ಗೆ ಕ್ಯೂಬಾ ತೀರದಲ್ಲಿ ಭೆಟ್ಟಿಯಾದ ಬಟ್ಟೆ ವರ್ತಕರು ಮಯರೆಂದು ತಿಳಿಯಿತು. ಮುಂಬರುವ ದಿನಗಳಲ್ಲಿ, ಕ್ಯೂಬ ಮತ್ತು ಹಿಸ್ಪಾನಿಯೋಲ ದ್ವೀಪಗಳ ಮೇಲೆ ಸ್ಪಾನಿಶ್ ಆಡಳಿತ ಉಂಟಾಗಿದ್ದು, ಸ್ಪಾನಿಶ್ ಆಕ್ರಮಿಗಳಿಗೆ ಯುಕಟಾನ್ ಪ್ರದೇಶವನ್ನು ಹತ್ತಿರದಿಂದ ನೋಡುವ ಅವಕಾಶ ಕೊಟ್ಟಿತು. 1526ರಲ್ಲಿ ಫ್ರಾನ್ಸಿಸ್ಕೊ ಮಾಂಟಿಯೊ ಎನ್ನುವವನು ಯುಕಟಾನ್ ಪ್ರದೇಶವನ್ನು ಗೆಲ್ಲಲು ದಂಡೆತ್ತಿದನು. ಮಯರು ತಮ್ಮ ಮೇಲೆ ಬಿದ್ದ ಸ್ಪೈನಿನ ಆಕ್ರಮಿಗಳನ್ನು ಎರಡು ದಶಕಗಳಿಗೂ ಹೆಚ್ಚುಕಾಲ ತಡೆದು ಹೋರಾಡಿದರು, ಕೊನೆಗೆ ಸೋತರು, ವಿಜಯಿಗಳಾದ ಸ್ಪೈನಿನ ಆಕ್ರಮಿಗಳು ಮಯರನ್ನು ಕೊಚ್ಚಿ ಹಾಕಿದರು. ಸ್ಪೈನಿನ ಸೈನಿಕರು ಯೂರೋಪಿನಿಂದ ತಂದ ರೋಗಗಳು ಮಯರನ್ನು ಅಳಿಸಿದವು. ಉಳಿದ ಮಯರು ಪಟ್ಟಣಗಳನ್ನು ಬಿಟ್ಟು ಗ್ರಾಮಗಳನ್ನು ಸೇರಿದರು. ಹೊಸ ಸ್ಪಾನಿಶ್ ಆಡಳಿತವು ಮಯರ ಮೇಲೆ ಅತಿಯಾದ ತೆರಿಗೆಗಳನ್ನು ಹೇರಿತು. ಆಗಾಗ್ಗೆ ಮಯರು ದಂಗೆಯೆದ್ದರು. ದಂಗೆಯನ್ನು ಆಡಳಿತವು ಕ್ರೂರತೆಯಿಂದ ತಡೆಯಿತು.

ಹೊಸ ಆಡಳಿತದೊಂದಿಗೆ ಹೊಸ ಧರ್ಮವೂ ಬಂದಿತು. ಕ್ರೈಸ್ತ ಪಾದ್ರಿಗಳು ತಮ್ಮ ಮತ ಪ್ರಾಚಾರಕ್ಕೆಂದು ಈ ಹೊಸ ಪ್ರದೇಶಕ್ಕೆ ಬಂದರು. ಕೆಲವೇ ವರ್ಷಗಳಲ್ಲಿ ಅವರಿಗೆ ಅನೇಕ ಅನುಯಾಯಿಗಳಾಗಿ, ಒಂದು ದೇವಾಲಯವನ್ನೂ ಕಟ್ಟಲಾಯಿತು. ಕೆಲವು ವರ್ಷಗಳನಂತರ ಅಲ್ಲಿಗೆ ಬಂದ ಡಿಯಿಗೊ ಡ ಲಾಂಡ (Diego de Landa) ಎಂಬ ಪಾದ್ರಿಯು, ಮಯರು ಅನುಸರಿಸುತ್ತಿದ್ದ ಪೂಜಾ ರೀತಿಗಳನ್ನು ಬಿಡಿಸಿ ಅವರನ್ನು ಉದ್ಧರಿಸಬೇಕೆಂಬ ಉದ್ದೇಶದಿಂದ, ಅತಿ ಕ್ರೂರವಾದ ರೀತಿಯಿಂದ ಮಯರ ಹಿಂದೆ ಬಿದ್ದನು. ಇವನು ಅನುಸರಿಸಿದ ವಿಧವು ಎಷ್ಟು ಕ್ರೂರವಾಗಿತ್ತೆಂದರೆ, ಇದನ್ನು ತಕ್ಷಣ ನಿಲ್ಲಿಸಬೇಕೆಂದು ಮೆಕ್ಸಿಕೋವಿನ ಬಿಶಪ್ಪಿನ ಆಜ್ಞೆಯಾಯಿತು. ಆದರೆ ಇಷ್ಟರಲ್ಲಿ ಮಯರ 20ಲಕ್ಷ ದೈವ ವಿಗ್ರಹಗಳು ಮತ್ತು ಸಾವಿರಾರು ಗ್ರಂಥಗಳು ನಾಶಕ್ಕೆ ಒಳಗಾಗಿದ್ದವು. ಇದರೊಂದಿಗೆ ಮಯರ ಇಡೀ ಸಾಹಿತ್ಯವೇ ನಾಶವಾಯಿತು. 1586ರಲ್ಲಿ ಮಯರ ವಿಗ್ರಹಾರಾಧನೆಯನ್ನು ನಿಷೇಧಿಸುವ ರಾಜಾಜ್ಞೆಯನ್ನು ಹೊರಡಿಸಲಾಯಿತು. 1577ರ ವೇಳೆಗೆ, ಒಂದು ವಿಚಿತ್ರ ಕಾಯಿಲೆಯಿಂದ 20ಲಕ್ಷ ಮಯರು ಸಾವಿಗೀಡಾದರು. ಮುಂದಿನ ದಿನಗಳ ಮಯರ ಇತಿಹಾಸವು ದಂಗೆಗಳಿಂದ ತುಂಬಿದೆ.

ಇಷ್ಟೆಲ್ಲಾ ಆದರೂ, ಮಯರ ಸಂಸ್ಕೃತಿಯು ಇನ್ನೂ ಹಾಗೆಯೇ ಉಳಿದಿದೆ. ಇಂದಿಗೂ ಸುಮಾರು 3 ಲಕ್ಷಕ್ಕೂ ಹೆಚ್ಚು ಜನರು, ತಮ್ಮ ಮೂಲವನ್ನು ಮಯರಿಗೆ ಗುರುತಿಸುವವರು ನಮ್ಮಲ್ಲಿ ಇದ್ದಾರೆ. ತಮ್ಮ ಭಾಷೆ, ವಸ್ತ್ರಾಲಂಕಾರ, ಹಸ್ತಕಲೆ, ಊಟೋಪಚಾರಗಳು ಇತ್ಯಾದಿಗಳ ಮೂಲಕ ತಮ್ಮ ಪುರಾತನ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದಿದ್ದಾರೆ.

## ಡಾ|| ರಾ. ಗಣೇಶ್‌ರವರ ಉಪನ್ಯಾಸಗಳು

# ಸಂಸ್ಕೃತ ರಂಗಭೂಮಿ ಮತ್ತು ಶಾಕುಂತಲ

ಸಂಗ್ರಹ : ಶ್ರೀಮತಿ ಸುಮನ್ ಕೆ. ಚಿಪ್ಳೂಣ್‌ಕರ್

*(ಮೈಸೂರು ಅಸೋಸಿಯೇಶನ್ ಸುವರ್ಣ ಮಹೋತ್ಸವ ದತ್ತಿ ಉಪನ್ಯಾಸದ ಸಂದರ್ಭದಲ್ಲಿ ಮಾಡಿದ ಉಪನ್ಯಾಸದ ಎರಡನೆಯ ಭಾಗ)*

**ಕಾ**ಳಿದಾಸನು ಬರೆದ 'ಅಭಿಜ್ಞಾನ ಶಾಕುಂತಲ' ಅವನ ಏಳು ಕೃತಿಗಳಲ್ಲಿ ಒಂದು. ಶಾಕುಂತಲ ನಾಟಕವಾದುದರಿಂದ ಸಹಜವಾಗಿಯೇ ಹಿಂದಿನ ಕಾಲದ ಸಂಸ್ಕೃತ ರಂಗಭೂಮಿಯ ಬಗೆಗೆ ತಿಳಿಯುವ ಕುತೂಹಲವಾಗುತ್ತದೆ. ಪ್ರಾಚೀನ ರಂಗಭೂಮಿಯ ಬಗೆಗೆ ತಿಳಿದಾಗ, ಶಾಕುಂತಲ ನಾಟಕ ಹೇಗೆ ಮಾಡುತ್ತಿದ್ದರು? ಎಂಬುದು ಅರಿವಾಗುತ್ತದೆ.

ನಾಟಕ ಒಂದು ಚಾಕ್ಷುಷ ಯಾಗ. ಕಣ್ಣಿಗೆ ಮಾಡಿದ ಯಜ್ಞ. ನಾಟಕದ ಉಗಮ ನಾಟಕೀಯವಾಗಿಯೇ ಆಗಿದೆ.

ಒಮ್ಮೆ ದೇವತೆಗಳೆಲ್ಲರೂ ಬ್ರಹ್ಮನ ಬಳಿಗೆ ಹೋಗಿ ''ಕ್ರೀಡನೀಯಕಂ ಇಚ್ಛಾಮೊ ದೃಷ್ಯಂ ಶ್ರೋತ್ರ್ಯಂಚ ಯದ್ಭವೇತ್ -ಅರ್ಥಾತ್ - ನಮಗೆ ನೋಟ ಮತ್ತು ಕೇಳ್ಮೆಯ ಆಟಿಕೆ ಬೇಕು'' - ಎಂದು ಕೇಳಿದರು.

ಕೃತಯುಗದಲ್ಲಿ ನಾಟಕವೆಂಬುದಿರಲಿಲ್ಲ. ಬದುಕೇ ರಂಜನೆ ಆಗಿತ್ತು. ಕಲೆ ಮತ್ತು ಜೀವನಕ್ಕೆ ಪೃಥಕ್ಕರಣೆ ಇರಲಿಲ್ಲ. ಕೃತಯುಗದ ಕೊನೆಗೆ ತ್ರೇತಾಯುಗದ ಪ್ರಾರಂಭದಲ್ಲಿ ಜನರಿಗೆ ಬದುಕಿನಲ್ಲಿ ಬದಲಾವಣೆ ಬೇಕಾಗಿತ್ತು, ಬದುಕಿನ ವಾಸ್ತವಕ್ಕಿಂತ ಸ್ವಲ್ಪವಾದರೂ ಬೇರೆಯಾದ ವಿಕ್ಷೇಪ ಬೇಕಾಗಿತ್ತು. ಹೀಗೆ ಕಲೆ ಅನಿವಾರ್ಯವಾಯಿತು. ನಾಟ್ಯ ಬದುಕನ್ನು ಇದ್ದಂತೆ ತೋರಿಸುವುದಲ್ಲ. ನಾಟ್ಯ ಶಾಸ್ತ್ರದಲ್ಲಿ ಬ್ರಹ್ಮ ಹೇಳುತ್ತಾನೆ...

''ತ್ರೈಲೋಕಸ್ಯ ಸರ್ವಸ್ಯ ನಾಟ್ಯ ಭಾವಾನು ಕೀರ್ತನಂ'' ಅಂತ. ನಾಟಕ ಅನುಕರಣೆ ಅಲ್ಲ. ಅದು ಅನುಕೀರ್ತನವಾಗಬೇಕು.

ಧನಂಜಯ ಭವಿಕರು ದಶರೂಪಕ ಮತ್ತು ದಶರೂಪಕ ಅವಲೋಕನದಲ್ಲಿ...

'ಕೃತಾನು ಕರಣಂ ನಾಟ್ಯಂ' ಎಂದಿದ್ದಾರೆ. ಪಂಪನೂ ತನ್ನ ಆದಿಪುರಾಣದಲ್ಲಿ ''ಕೃತಾನುಕರಣಮೆ ನಾಟ್ಯಂ'' ಎಂದಿದ್ದಾನೆ. ಅನುಕರಣ ಮಾತ್ರ ನಾಟ್ಯ ಅಲ್ಲ. ಅದು ಅನುಕೀರ್ತನವಾಗಿರಬೇಕು.

ಅಭಿನವ ಗುಪ್ತನು ''ಅನು ವ್ಯವಸಾಯಾತ್ಮಿಕಾ ಕೃಷಿ'' ಅರ್ಥಾತ್ ಅತಿಶಯ ಅನ್ನುವಂತೆ ಮಾಡುವುದು. ವಾಸ್ತವಕ್ಕೆ ಸ್ವಲ್ಪ ವಿಶೇಷತೆಯನ್ನು ಜೋಡಿಸಿ ವರ್ಣಿಸುವುದು. ಇದನ್ನು exalted imitation ಎನ್ನುತ್ತಾರೆ. ಮುಖವನ್ನು ಇದ್ದಂತೆ ವರ್ಣಿಸುವುದಲ್ಲ. ಇರಬೇಕಾದ ರೀತಿಯಲ್ಲಿ ವರ್ಣನೆ ಮಾಡುವುದು. Something added to reality ಎನ್ನುವಂತೆ. ಇದಕ್ಕೆ ಉಪಮಾ, ಉತ್ಪ್ರೇಕ್ಷೆ, ಸಮಾಸೋಕ್ತಿ ಮುಂತಾದ ನೂರಾಇಪ್ಪತ್ನಾಲ್ಕು ಅಲಂಕಾರಗಳೂ ಸಹಾಯಕ. ಅಲಂಕಾರಗಳ ಹೆಸರುಗಳೇ ಉಪಮಾ - ಶೋಭೆಯನ್ನು ಅಳೆಯುವುದು ಉತ್ಪ್ರೇಕ್ಷೆ ಮೇಲ್ಮಟ್ಟದಿಂದ ನೋಡುವುದು - ಒಂದು ಪ್ರಕಾರದ ಉನ್ನತಿಯನ್ನು ತೋರಿಸುತ್ತವೆ.

ಭವ-ಬದುಕು ಎಂಬುದು ವ್ಯಕ್ತಿಗತ ಸಂಬಂಧ ದಿಂದ ಭಾವವಾದರೆ ಅದನ್ನು ಸಾರ್ವಜನೀನ ಮಾಡಿದಾಗ ದೇಶ, ಕಾಲಗಳ ಪರಿಧಿ ಕಳಚಿ ಅದು ರಸವಾಗುತ್ತದೆ.

ಜಗನ್ನಾಥ ಪಂಡಿತರ ರಸಗಂಗಾಧರದಲ್ಲಿ

ಭಗ್ನಾವರಣ ಚಿದೇ ವರಕ : ಅರ್ಥಾತ್ ಚೈತನ್ಯವು ಅವಿದ್ಯೆಯ ಕವಚ ಕಳೆದಾಗ ರಸ ಆಗುತ್ತದೆ.

ಕಲೆ - ಅದು ತರ್ಕಾತೀತ. Transends logic ಹೊರತು ಕಲೆ ತರ್ಕ ತಿರಸ್ಕರಿಸುವುದಿಲ್ಲ, ತರ್ಕವನ್ನು ಅಧಿಗಮಿಸುತ್ತದೆ. ಕಾರ್ಯ ಕಾರಣಭಾವ ಮೀರಿ ಹೋಗುವಂತಹುದು ಕಲೆ.

ನಾಟ್ಯಶಾಸ್ತ್ರಕಾರ, ವಿಭಾವ - ಕಾರಣ, ಅನುಭಾವ ಕಾರ್ಯಗಳಿಗೆ ಪೋಷಕವಾಗಿ ಸಂಚಾರೀಭಾವ ಸೇರಿದಾಗ 'ರಸ' ಉಂಟಾಗುತ್ತದೆ ಎಂದು ಕಲಾತ್ಮಕವಾಗಿ ಹೇಳುತ್ತಾನೆ.

ಆ ದೃಷ್ಟಿಯಿಂದಲೇ ಭಾರತೀಯರಲ್ಲಿ ಪಾಶ್ಚಾತ್ಯರಂತೆ 'ದುರಂತ' ನಾಟಕಗಳಿಲ್ಲ. ದುರಂತವಾದರೂ ಕೊನೆಗೆ ಸುಖಾಂತವಾಗುತ್ತದೆ. ಮಂಗಳದಲ್ಲಿ ಕೊನೆಗೊಳ್ಳುತ್ತದೆ. ಈ ದೃಷ್ಟಿಯಲ್ಲಿ ಭಾರತೀಯ ರಂಗಭೂಮಿ ಬೆಳೆಯಿತು. ವಾಸ್ತವ ದೊಂದಿಗೇ ಸೌಂದರ್ಯಾನುಭೂತಿಯನ್ನು ಉಂಟು ಮಾಡುತ್ತದೆ.

ಗದ್ಯವನ್ನು ಪದ್ಯದಲ್ಲಿ ಹೇಳಿದರೆ ಅದು ಕೃತಕವಾಗುವುದಿಲ್ಲ ಕೃತಿ ಆಗುತ್ತದೆ. ಅಂತೆಯೇ ನಾಟ್ಯ ಕೃತಿ ಆಗಬೇಕು. ಅದಕ್ಕೋಸ್ಕರ ಅಲೌಕಿತೆಗೆ ಹೆಚ್ಚಿನ ಪ್ರಾಶಸ್ತ್ಯ ನೀಡಿತು.

ಅಲೌಕಿಕತೆಯಿಂದಾಗಿ ಕಲೆಯು ಯಾವ ದೇಶಕಾಲಕ್ಕೆ ಅಂಟಿಕೊಳ್ಳದೆ ಎಲ್ಲಾ ಕಾಲಕ್ಕೂ ಸರಿಹೊಂದುತ್ತದೆ. ನಾಟ್ಯ ಶಾಸ್ತ್ರದ 'ಆಹಾರ್ಯ' ವೇಷಭೂಷಣ, ಯಾವ ಕಾಲಕ್ಕೂ ಸರಿಹೋಗುವಂತೆ. ಮಾಡಿರುವುದೇ ಹಾಗೂ ಅಲೌಕಿಕತೆಯನ್ನು ಕಾಪಾಡಿಕೊಂಡು ಬಂದಿರುವುದೇ ಪ್ರಾಚೀನ ರಂಗ ಕಲೆಯ ಅದ್ಭುತ ಸಾಧನೆ ಎನ್ನಬಹುದು. ಆದುದರಿಂದ ಪ್ರಾಚೀನ ಭಾರತೀಯ ರಂಗಭೂಮಿಯಲ್ಲಿ ತನ್ನದೆ ಆದ ಚಲನೆ, ಭಾಷೆ, ಅಲಂಕಾರ, ಸಂಗೀತಗಳನ್ನು ಅಳವಡಿಸಿದ್ದಾರೆ. ವಾಸ್ತವಕ್ಕೆ ಹತ್ತಿರ ಬಂದರೂ ವಾಸ್ತವ ಅಲ್ಲ.

ಭರತನ ರಂಗಕಲೆಯಂತೆ - ಹತ್ತು ಪ್ರಕಾರದ 'ರೂಪಕ'ಗಳು ಕಾಣಿಸುತ್ತವೆ. ಅವುಗಳು ತಮ್ಮ ವಿಶಿಷ್ಟತೆಯಿಂದ ವೈವಿಧ್ಯ ಪೂರ್ಣವಾಗಿವೆ.

೧. ಸಮವಕಾರ - ದೇವತಾ ಪಾತ್ರಗಳಿದ್ದು, ದೇವತಾರಾಧನೆ ಮುಖ್ಯ.
೨. ಡಿಮಾ - ಬಣ್ಣದ ವೇಷಗಳಿದ್ದು ರೌದ್ರ, ಅಟ್ಟಹಾಸ ಮುಖ್ಯ.
೩. ಪ್ರಹಸನ - ಹುಚ್ಚು ಹೊಳೆ ಹಾಸ್ಯವಿದ್ದು ವಾಸ್ತವಕ್ಕೆ ಹತ್ತಿರ.
೪. ಭಾಣ - ಶೃಂಗಾರವೂ, ಅಲ್ಪಸ್ವಲ್ಪ ಅಶ್ಲೀಲತೆ ಇರುತ್ತದೆ.
೫. ಅಂಕ - ಕಣ್ಣೀರ ಕಥೆ ಶೋಕವಿರುತ್ತದೆ.
೬. ಈ ಹಾಮೃಗ - ಚಮತ್ಕಾರಗಳಿಂದ ಕೂಡಿದ್ದು ಗವೇಷಣ ಪ್ರಾಯವಾಗಿರುತ್ತದೆ.
೭. ವ್ಯಾಯೋಗ - ಜಗಳ, ಚಿತ್ತ ಬಾಧೆ ಉಂಟಾಗುವಂತಹದ್ದು.
೮. ನೀತಿ - ವಾಸ್ತವಕ್ಕೆ ಹತ್ತಿರವಿರುವ, ಸಂತೋಷ ನೀಡುವ ವಿಷಯವಿದೆ.
೯. ಪ್ರಕರಣ } ಇವುಗಳೆರಡೂ ಪೂರ್ಣಪ್ರಕಾರದ
೧೦. ಪ್ರಕರಣ } ರಸಿಕರಿಗೆ ಸಂತೋಷ ನೀಡು ವಂತಹವು ಹಾಸ್ಯ ಕಡಿಮೆ, ವಾಸ್ತವಕ್ಕೆ ನಿಕಟ.

ಬೇಂದ್ರೆಯವರ ಹೇಳಿಕೆಯಂತೆ ''ಓಂಕಾರದ ಶಂಖನಾದಕ್ಕಿಂತ ಕಿಂಚಿದೂನ'' ಇದ್ದಂತೆ.

ಕಾಳಿದಾಸನ ಶಾಕುಂತಲ, ಭಾಸ, ಭವಭೂತಿಯರ ನಾಟಕಗಳು ಜನರು ಆಸ್ವಾದ ಮಾಡದಿದ್ದರೆ ಅದಕ್ಕೆ ಅವರ ಶುಚಿ ವೈವಿಧ್ಯವೇ ಕಾರಣ. ದೃಷ್ಟಿಕೋನದ ಭಿನ್ನತೆ ವಾಸ್ತವಕ್ಕೆ ಕಟ್ಟುಬಿದ್ದು ಪಾಶ್ಚಾತ್ಯರು ಲೋಕೋತ್ತರವಾದ ಮೃಚ್ಛ ಕಟಿಕ ಮತ್ತು ಮುದ್ರಾ ರಾಕ್ಷಸ ಈ ನಾಟಕಗಳನ್ನು ಬಹಳ ಮೆಚ್ಚುತ್ತಾರೆ.

ಯಾರಿಗೆ ರಸಾಸ್ವಾದ ಬೇಕಾಗುತ್ತದೋ ಅವರಿಗೆ ರಸಸಿದ್ಧಾಂತದ ಹೃದಯ ಗೊತ್ತಿರಬೇಕು. ಡಿ.ವಿ.ಜಿ., ಪು.ತಿ.ನ., ಸೇಡಿಯಾಪು ಕೃಷ್ಣ ಭಟ್ಟ, ರಸಸಿದ್ಧಾಂತ ಬಲ್ಲವರು. ಬೋಧ ಮತ್ತು ಮೋದ ಎರಡು ಬೇರೆ ಅಲ್ಲ. ರಸಾಸ್ವಾದದಲ್ಲಿ ಬುದ್ಧಿ ಕಳೆಚಿಕೊಳ್ಳದೆ ರಸವನ್ನು ಆಸ್ವಾದಿಸಿದರೆ ಅದನ್ನು 'ಸಚ್ಚಿದಾನಂದ' ವೆಂದಿದ್ದಾರೆ. ರಸಾನಂದ ಕಾಲದಲ್ಲಿ ಬುದ್ಧಿ ಮುಳುಗಿ ಹೋಗುವು ದಿಲ್ಲ. ಬುದ್ಧಿ ತಾನಾಗಿಯೇ ಇರುತ್ತದೆ. ರಸದ ನಿರಂತರ ಆಲೋಚನೆಯಿಂದ ಪರಿಪಾಕಗೊಂಡ ಮನಸ್ಸೇ ಅದನ್ನು ಅರ್ಥ ಮಾಡಿಕೊಳ್ಳಲು ಸಮರ್ಥ.

ಭಾರತೀಯ ರಂಗಭೂಮಿ ಗ್ರೀಕರಿಂದ ಪ್ರಭಾವಿತ ವಾಗಿತ್ತು ಎಂಬುದು ಸರಿಯಲ್ಲ. 'ಯವನಿಕಾ' ಈ ಶಬ್ದ ಗ್ರೀಕರನ್ನು ಸೂಚಿಸುವುದಿಲ್ಲ. ಇದು 'ಜವನಿಕಾ' ಎಂಬುದನ್ನು ಸೂಚಿಸುತಿದ್ದು - ಪರದೆಯನ್ನು ಸರ್‍ರನೆ ಎಳೆಯುವುದು ಎಂದರ್ಥ. ಯಾವುದೇ ದೇಶದ ಸಂಗೀತ, ಸಾಹಿತ್ಯ, ಚಿತ್ರ, ರಂಗಕಲೆಗಳು ಆ ಮಣ್ಣಿಗೆ ಸಂಬಂಧ ಪಟ್ಟೇ ಬೆಳೆಯುವುವು ಹೊರತು ಬೇರೆ ದೇಶದಿಂದ ಬಂದುವುಗಳಲ್ಲ. ಕಾರಣ ಜನರು ತಮ್ಮ ಮಣ್ಣಿಗೆ ಅನುಕೂಲವಾಗುವಂತೆ ತಮ್ಮ ಕಲೆಗಳನ್ನು

ಅನಿವಾರ್ಯವಾಗಿ ನಿರ್ಮಿಸುತ್ತಾರೆ.

ಪ್ರಾಚೀನ ರಂಗಭೂಮಿಯಲ್ಲಿ ಎರಡು ಭಾಗಗಳಿದ್ದುವು. ೧. ಪೂರ್ವ ರಂಗ ೨. ಪರ ರಂಗ.

ಮುಖ್ಯ ನಾಟಕ ಮಾಡುವ ಮೊದಲಿನ ಭಾಗವೇ ಪೂರ್ವ ರಂಗ. ಪೂರ್ವ ರಂಗದಲ್ಲಿ ತೆರೆ ತೆರೆದಿರುವಾಗಲೇ ಮುಖ್ಯ ಪ್ರಯೋಗಕ್ಕೆ ಮೊದಲು ಒಂದು ಅಭ್ಯಾಸ ನಡೆಯುತ್ತಿತ್ತು. ೧. ಬಂದ ರಸಿಕರನ್ನು ಸಂಗೀತ, ಹಾಸ್ಯಗಳಿಂದ ರಂಜಿಸುವುದು. ೨. ಭವಿಷ್ಯದ ಕಲಾವಿದರನ್ನು ತರಬೇತಿಗೊಳಿಸುವುದು. ೩. ಯಾರಿಗೆ ರಸಪ್ರಬುದ್ಧತೆ ಇಲ್ಲವೋ ಅವರು ಹೋಗುವ ತನಕವೂ ಪೂರ್ವರಂಗದ ಕಾರ್ಯಕಲಾಪಗಳು ನಡೆಯುತ್ತಿದ್ದುವು.

ಪೂರ್ವ ರಂಗ ಹತ್ತೊಂಬತ್ತು ಅಂಗಳನ್ನೊಳಗೊಂಡಿತ್ತು. ಮೊತ್ತ ಮೊದಲನೆಯದಾಗಿ ಹಿಮ್ಮೇಳದವರು ತಮ್ಮ ವಾದ್ಯಗಳೊಂದಿಗೆ ರಂಗಸ್ಥಳದ ಹಿಂದೆಯೇ ಕುಳಿತುಕೊಳ್ಳುವರು. ರಂಗಸ್ಥಳ ಯಕ್ಷಗಾನದಂತೇ ಇರುತ್ತಿತ್ತು. 'ಉತೂಪ' ಎಂದೂ ಹಿಮ್ಮೇಳದವರನ್ನು ಕರೆಯುತ್ತಿದ್ದರು. ಅವರು ತಮ್ಮ ಭಾಂಡವಾದ್ಯ, ಊದುವವಾದ್ಯ, ತಂತಿವಾದ್ಯ ವೀಣೆ, ವಾಯಲಿನ್‌ಗಳಂತಿರುದವುಗಳನ್ನು, ಮೃದಂಗ ಪುಷ್ಕರಗಳನ್ನು ಸಿದ್ಧಗೊಳಿಸಿ ಸಂಗೀತ ನುಡಿಸುತ್ತಿದ್ದರು. ದಿಗ್ದೇವತೆಗಳಿಗೆ ವಂದನೆ ಮಾಡುತ್ತಿದ್ದರು. ಇಬ್ಬರು ಗಾಯಕ, ಗಾಯಕಿಯರು ಇರುತ್ತಿದ್ದರು.

ಕಲಾವಿದರು ಹಾಡುತ್ತಿರಲಿಲ್ಲ. ಅಭಿನಯ ಮಾತ್ರ ಮಾಡುತ್ತಿದ್ದರು. ಅಭಿನಯದಲ್ಲಿ ಸಂಭಾಷಣೆ, ಸ್ತೋತ್ರಗಳಿರುತ್ತಿದ್ದವು. ಧ್ರುವಗೀತೆಗಳಿಗೆ ಬಹಳ ಪ್ರಾಮುಖ್ಯವಿತ್ತು. ನಾಟ್ಯಶಾಸ್ತ್ರದಲ್ಲಿ ಇನ್ನೂರು ಮುನ್ನೂರು ಧ್ರುವಗೀತೆಗಳಿವೆ ಎಂದಿದೆ. ಅವುಗಳು ಪ್ರಕೃತ ಭಾಷೆಯಲ್ಲಿರುತ್ತಿದ್ದವು. ಕಾರಣ ಪ್ರಾಕೃತ ಆಡು ಭಾಷೆಯಾದ ಸಂಸ್ಕೃತ. ಸಂಸ್ಕೃತಕ್ಕಿಂತ ಸೊಗಸು ಮತ್ತು ಇಂಪು. ಆ ಇನ್ನೂರು ಧ್ರುವಗೀತೆಗಳಲ್ಲಿ ಕೆಲವು ಯಾವುದೇ ನಾಟಕದಲ್ಲಿ ಇರಬೇಕಾದಂತಹವು. ಯಾವ ಪ್ರಸಂಗದಲ್ಲೂ ಹಾಡುವಂತಹವು. ಮತ್ತೆ ಕೆಲವು ಧ್ರುವ ಗೀತೆಗಳನ್ನು ಸಂದರ್ಭಾನುಸಾರ ಹಾಡುತ್ತಿದ್ದರು. ಅಂತಹ ಧ್ರುವಗೀತೆಗಳು ಐದು ಪ್ರಕಾರ.

ಪಾತ್ರಗಳು ಪ್ರವೇಶಿಸುವಾಗ - ಪ್ರಾವೇಶಿಕ ಧ್ರುವ ಗೀತೆ

ಪಾತ್ರಗಳು ಹೋಗುವಾಗ - ನೈಷ್ಕ್ರಾಂತಿಕ

ಮಧ್ಯದಲ್ಲಿ ಹಾಡುವಾಗ - ಅಂತರಾ

ಕೋಪ, ಆವೇಶದಲ್ಲಿ ಹಾಡುವಾಗ - ಆಕ್ಷಿಪ್ತಿಕಿ, ಭಾವಮಯವಾಗಿ ಶಾಂತಿಯಲ್ಲಿರುವಾಗ - ಪ್ರಾಸಾದಿಕ.

ನಾಟ್ಯ ಶಾಸ್ತ್ರಕಾರ ಹೇಳುವಂತೆ - ಭಾವ ತೀವ್ರತೆ ಇರುವಾಗ ನೃತ್ಯ ಇರುತ್ತಿರಲಿಲ್ಲ.

ಭಾವ ತೀವ್ರತೆ ಇಲ್ಲದಿದ್ದಾಗ - ನೃತ್ಯವಿರುತಿತ್ತು. ನಾಟ್ಯದಲ್ಲಿ ನೂರೆಂಟು ಕರಣಗಳನ್ನು ಪ್ರದರ್ಶಿಸುತ್ತಿದ್ದರು. ಪುರುಷ ಸ್ಥಾನಕ - ಆರು, ಸ್ತ್ರೀ ಸ್ಥಾನಕ - ಮೂರು. ಮೂವತ್ತು ನೃತ್ಯ ಹಸ್ತಗಳನ್ನು ಪ್ರದರ್ಶಿಸುತ್ತಿದ್ದರು

೧. ಅಭಿನಯ ಹಸ್ತ, ೨. ಕೇಶಬಂಧ ಹಸ್ತ, ೩. ಉಲ್ಬಣ ಹಸ್ತ, ೪. ರೇಚಿತ ಹಸ್ತ, ೫. ಗೋಲಹಸ್ತ ಇತ್ಯಾದಿ.

ಮೂವತ್ತೆರಡು ಚಾರಿಗಳನ್ನು ಅಭಿನಯಿಸುತ್ತಿದ್ದರು. ಅವುಗಳು ಭೂಮಿಚಾರಿ, ಆಕಾಶಚಾರಿ ಎಡತಾ ಕ್ರೀಡಿತದಂತಹ ಜಾನಪದ ನೃತ್ಯದಂತಿರುವ ನಾಟ್ಯವನ್ನೂ ಮಾಡುತ್ತಿದ್ದರು.

ತೆಂಕುತಿಟ್ಟು, ಬಡಗು ತಿಟ್ಟುಗಳ, ಉತ್ಪ್ಲುತಭ್ರಮರಿ ಮತ್ತು ಜಾಹ್ನು ಭ್ರಮರಿಗಳನ್ನು ಬಳಸುತ್ತಿದ್ದರು.

'ಆಹಾರ್ಯ'ವೆಂದರೆ ವೇಷ ಭೂಷಣ. ಪಾತ್ರಗಳಂತೆ ಬಣ್ಣಗಳನ್ನು ಬಳಸುತ್ತಿದ್ದರು.

ಧೀರೋದಾತ್ತ ಪಾತ್ರಕ್ಕೆ - ಶೃಂಗಾರದ - ಪಚ್ಚೆ ಬಣ್ಣ

ರಾಕ್ಷಸ ವೇಷಕ್ಕೆ - ಕರಿಬಣ್ಣ

ಹನುಮಂತನಂತಹ ವೇಷಕ್ಕೆ - ತಾಡಿ ಅರ್ಥಾತ್ ಗಡ್ಡ ಇಡುತ್ತಿದ್ದರು.

ರೌದ್ರವೀರಕ್ಕೆ - ಕತ್ತಿ ಎಂದೂ ಕೆಂಪು ಬಣ್ಣ ವಿರುತಿತ್ತು.

ಅಲೌಕಿಕಶಕ್ತಿ ಸಂಪನ್ನತೆಗೆ - ಮಿನಕವೆಂದರು.

ಬ್ರಾಹ್ಮಣ, ಋಷಿಗಳು - ಅವರಿಗೆ ಹಳದಿ ಬಣ್ಣ ಪ್ರಯೋಗ,

ಆಹಾರ್ಯಾಭಿನಯದ ಅಲಂಕಾರಗಳು ಅವು ಐದು ಪ್ರಕಾರದವುಗಳಿದ್ದವು.

೧. ಆವೇಶ, ೨. ಅಭೇದ್ಯ, ೩. ಅವೇದ್ಯ, ೪. ಆರೋಪ್ಯ, ೫. ಪ್ರಕ್ಷೇಪ್ಯ

ಅರವತ್ನಾಲ್ಕು ಪ್ರಕಾರದ ವಸ್ತ್ರಾಭರಣಗಳಿದ್ದವು. ಸೊಂಟ ಪಟ್ಟಿ, ಕಿರೀಟ,... ಹೀಗೆ

ಅಂಕ ಮುಗಿದಾಗ ತೆರೆ ಹಾಕುತ್ತಿರಲಿಲ್ಲ. ರಾಜನು ತನ್ನ ಪರಿವಾರದ ಜೊತೆ ಬರುವಾಗ ಚಿಕ್ಕಪರದೆಯೊಂದನ್ನು ಹಿಡಿಯುತ್ತಿದ್ದರು. ಅವನು ತನ್ನ ಓಲಗದಲ್ಲಿ ಆಸೀನನಾದಾಗ ಅದನ್ನು ಸರಿಸುತ್ತಿದ್ದರು.

ಸ್ವಗತ ಮಾತಾಡುವಾಗ ತ್ರಿಪತಾಕಾ ಹಸ್ತಪ್ರದರ್ಶಿಸಿ ಎಷ್ಟು ಜೋರಾಗಿ ಮಾತಾಡಿದರೂ ಅದು ಸ್ವಗತವೇ ಎಂಬುದಾಗಿತ್ತು.

ಪಾತ್ರಗಳು ರಂಗಸ್ಥಳದ ಒಂದು ಬದಿಯಿಂದ ಪ್ರವೇಶಿಸಿ ಇನ್ನೊಂದು ಬದಿಯಿಂದ ನಿರ್ಗಮಿಸುತ್ತಿದ್ದರು. ಪ್ರದಕ್ಷಿಣಾಕಾರವಾಗಿ ತಿರುಗಿ ಮೂರು ಲೋಕಗಳನ್ನು ಸುತ್ತಿದ ಅಭಿನಯ ಮಾಡುತ್ತಿದ್ದರು. ರಂಗಸ್ಥಳದ ಎರಡೂಬದಿಗಳಲ್ಲಿ ಮತ್ತಭಾರಣಿ ಎಂಬ ಸ್ವಲ್ಪ ಎತ್ತರದ ಭಾಗವಿರುತಿತ್ತು. ಆಕಾಶಗಮನ, ದೂರದಿಂದ ಕೊಡುವ ಸಂದೇಶಗಳನ್ನು ಅವುಗಳ ಮೇಲೆ ನಿಂತು ತೋರಿಸುತ್ತಿದ್ದರು. ಸ್ಟೇಜ್ ಸೆಟ್ಟಿಂಗ್ ಎಂಬುದು ಇರಲಿಲ್ಲ.

ಕೊನೆಗೆ ಸ್ವಾರಸ್ಯಕರವಾದ ಭರತವಾಕ್ಯ ಇರುತಿತ್ತು. ಎಲ್ಲ ಪಾತ್ರಧಾರಿಗಳು ಸೇರಿ ಶುಭ ಕೋರುತ್ತಿದ್ದರು. ವಾದ್ಯಗಾರರು ಕುಳಿತುಕೊಳ್ಳುವುದಕ್ಕೆ ಸಂಸ್ಥಾಪನೆ, ವಾದ್ಯಗಳನ್ನು ಟ್ಯೂನ್ ಮಾಡುವುದಕ್ಕೆ ಆಕಾಲಿಕ ಮತ್ತು ಜೋರಾಗಿ ಬಾರಿಸುವುದಕ್ಕೆ ಸಂಸ್ಫೋಟನ ಎನ್ನುತ್ತಿದ್ದರು.

ನಂತರ ಸೂತ್ರದಾರ ತನ್ನ ಇಬ್ಬರು ಸಂಗಡಿಗರೊಂದಿಗೆ ಬಂದು ಇಂದ್ರಧ್ವಜ ಪ್ರಸ್ಥಾಪಿಸುತ್ತಿದ್ದನು. ನಾಲ್ಕು ದಿಕ್ಪಾಲಕರಿಗೆ ವಂದಿಸಿ - ನಾಟಕ ಆಡಿಸಿದವರಿಗೆ, ರಾಜನಿಗೆ, ದೇಶಕ್ಕೆ, ಸಜ್ಜನರಿಗೆ ಶುಭವಾಗಲಿ ಎಂದು 'ಏವಮಸ್ತು ತಥಾಸ್ತು' ಎಂದು ಕೋರುತ್ತಿದ್ದರು.

ಅನಂತರ - ವಿನೋದಗಳು - ಮಲಯಾಳೀ ಬ್ರಾಹ್ಮಣರದ್ದು ಇರುತ್ತಿದ್ದುವು. ಮುಂದೆ ಚಿತ್ರ ಪೂರ್ವರಂಗವೆಂದು ನಾಲ್ಕು ಅಥವಾ ಇಬ್ಬರು ಸ್ತ್ರೀ ವೇಷಧಾರಿಗಳು ಲಾಸ್ಯದಿಂದ ನೃತ್ಯ ಗೈಯುತ್ತಿದ್ದರು. ವಿವಿಧ ಕರಣಗಳನ್ನು ಅಭಿನಯಿಸುತ್ತಿದ್ದರು. ಹೀಗೆ ಒಂದು ಅಲೌಕಿಕ ವಾತಾವರಣವನ್ನು ನಿರ್ಮಿಸುತ್ತಿದ್ದರು. ಭರತನ ಹೇಳಿಕೆಯಂತೆ ಯಾವುದೇ ನಾಟಕ ಪ್ರಯೋಗ ನಾಲ್ಕು ತಾಸಿಗೆ ಮೀರಬಾರದು.

**ಮುಖ್ಯಪ್ರಸಂಗ - ನಾಟಕ**

ನಾಟಕ ಪ್ರಾರಂಭದಲ್ಲಿ ಸೂತ್ರಧಾರನು ಪ್ರಸ್ತಾವನೆ ಮಾಡುತ್ತಾನೆ. ಅದರಲ್ಲಿ ಕೃತಿಕಾರನ ಪರಿಚಯ, ನಾಟಕದ ಉದ್ದೇಶ ಹೇಳುತ್ತಾನೆ. ಸೂತ್ರಧಾರನ ಪ್ರಸ್ತಾವನೆಯಲ್ಲೇ ಯಾವ ನಾಟಕ ಆಡೋಣ? ಎಂದು ಎಂದು ಕೇಳಿ ತಾನೇ ನಾಟಕ ಮರೆತಂತೆ ತೋರಿಸಿದ ದುಷ್ಯಂತನ ಮರವೆಯನ್ನು ಪ್ರಸ್ತಾಪಿಸುತ್ತಾನೆ. ಇದು ನಾಟಕದ ಹೃದಯವನ್ನು ತೆರೆದಿಟ್ಟಂತೆ.

ರಂಗಸ್ಥಳದ ಮೇಲೆ ನಾಟಕದ ಕಲಾವಿದರಿಗೆ ವಿಶೇಷ ನೈಪುಣ್ಯವಿರಬೇಕಾಗುತ್ತಿತ್ತು.

ಕಲಾವಿದರು ಮಾತುಗಾರಿಕೆಯಲ್ಲಿ ನಿಪುಣರಿರಬೇಕು. ಅವರು ಸಂಗೀತ ಚೆನ್ನಾಗಿ ಹಾಡಬಲ್ಲವರಿರಬೇಕು. ಮೈ ವ್ಯಾಯಾಮ ಮಾಡಿಬೇಕಾದಂತೆ ಬಗ್ಗಿಸುವವರಿರಬೇಕು. ಯಾವರ್ತಿತ ಮತ್ತು ಪರಿವರ್ತಿತ ಮಾಡುವಾಗ ಬೆರಳುಗಳನ್ನು ಸಲೀಸಾಗಿ ಅರಳಿಸುವವರಾಗಿರಬೇಕು. ಹಸ್ತಕರಣ ಚೆನ್ನಾಗಿ ಅರಿತಿರಬೇಕು. ಕಟಿ ಪ್ರಭೇದ, ಉದರಭೇದ, ಪಾರ್ಶ್ವ ಭೇದ, ವೃಕ್ಷ ಭೇದ, ಗ್ರೀವಾ ಭೇದ, ಶಿರೋ ಭೇದಗಳನ್ನು ತುಂಬಾ ಸಲೀಸಾಗಿ ಮಾಡುವವರಿರಬೇಕು. ಹೀಗೆ ಕಲಾವಿದನಿಗೆ ನೈಪುಣ್ಯ, ಸಾಮರ್ಥ್ಯಗಳು ಅಗತ್ಯ.

**ಶಾಕುಂತಲ ನಾಟಕ**

ಶಕುಂತಲೆ ಪಕ್ಷಿಗಳ ಮಧ್ಯೆ ಬೆಳೆದವಳು. ಶಕುಂತ ಪಕ್ಷಿಯಿಂದ 'ಲಾತಿ' ಪಡೆಯಲ್ಪಟ್ಟವಳು. ಅಭಿಜ್ಞಾನ ವೆಂದರೆ ಗುರುತು Cognition ಎಂದರೆ ಭಾವ, recognition ಎಂದರೆ ರಸ. ಭವದಿಂದ ಹಾಗೆ ಕಾಣುವುದು ಭಾವವಾದರೆ ಭಾವದಿಂದ ನೋಡಿದ್ದು ದನ್ನು ಮತ್ತೆ ಕಂಡುಕೊಳ್ಳುವುದು ರಸ. ಭವವನ್ನು ವಿಶಿಷ್ಟ ರೀತಿಯಲ್ಲಿ ಕಾಣುವುದು - ರಸ.

ಕಾಳಿದಾಸ ನಾಟಕದಲ್ಲಿ ಎರಡು ಮುಖ್ಯ ಅಂಶಗಳನ್ನು ಹೇಳುತ್ತಾನೆ. ೧. ಸಂಮೋಹ, ೨. ಪ್ರತಿಬೋಧ ಸಂಮೋಹವೆಂದರೆ - ಜೀವರಲ್ಲಿರುವ ಅವಿದ್ಯೆ ಎಂಬ ಅಜ್ಞಾನ.

ಪ್ರತಿಬೋಧವೆಂದರೆ - ಅವಿದ್ಯೆಯ ಅಜ್ಞಾನ ಕಳಚಿದಾಗ ಉಂಟಾಗುವ ಜ್ಞಾನ. ಅಂದರೆ ತನ್ನತನವನ್ನು

ಗುರುತಿಸಿಕೊಳ್ಳುವುದು ಎಂದರ್ಥ. ಅದಕ್ಕೇ ಕಾಳಿದಾಸನು - ಯಾ ಸೃಷ್ಟಿ, ಎಂದು ಪ್ರಾರಂಭಿಸಿ ಪುನರ್ಭವಂ ಕ್ಷಯತು' ಅರ್ಥಾತ್ ಈ ಬದುಕು ಚೆನ್ನಾಗಿದೆ. ಆದರೆ ಇನ್ನೊಂದು ಜನ್ಮಬೇಡ ಎನ್ನುವ ನೆಲೆಗೆ ಬರುತ್ತಾನೆ. ಯಾವುದೇ ಮಹಾಕಾವ್ಯವು ಒಂದು 'ಸಾತ್ವಿಕ ಪಯಣ'ವಿರುತ್ತದೆ. ಅದರ ಕೇಂದ್ರಭೂತ ರಸವೇ 'ಶಾಂತರಸ' ಭರತನು ಹೇಳಿದು ಎಂಟುರಸ ಶಾಂತ 'ಒಂದು' ರಸವಲ್ಲ. ಅದು ಎಲ್ಲ ರಸಗಳ ಹಿನ್ನೆಲೆಯಲ್ಲಿರುವ 'ಮುಖ್ಯ' ರಸ. ಎಲ್ಲ ರಸಗಳೂ ಶಾಂತರಸದ ಮೇಲೆ ಸ್ಥಿತವಾಗಿದೆ. ಶೃಂಗಾರದ ಮೂಲಕ ಶಾಂತ ಮುಟ್ಟುವಂತೆ ವೀರ, ರೌದ್ರ, ಹಾಸ್ಯ ಭೀಭತ್ಸ, ಭಯಾನಕ, ಅದ್ಭುತದ ಮೂಲಗಳೂ 'ಶಾಂತ'ದಲ್ಲೇ ಕೊನೆಗೊಳ್ಳುತ್ತವೆ.

ಎಲ್ಲ ರಸಗಳಲ್ಲಿ ವಿಸ್ತರಣೆಗೆ ಅನುಕೂಲವಾದ ರಸ ಶೃಂಗಾರ ಮತ್ತು ವೀರರಸ.

ಇತರ ಎಲ್ಲ ರಸಗಳು ಕರ್ಪೂರದಂತೆ ಭಗ್ಗೆಂದು ಕ್ಷಣಾರ್ಧದಲ್ಲಿ ಉರಿದು ಹೋಗಿ ಮಾಯವಾಗುವವು. ವೀರರಸವನ್ನು ಧರ್ಮವೀರ, ದಯಾವೀರ, ದಾನವೀರ ಮತ್ತು ಯುದ್ಧವೀರ ಎಂದು ವಿಸ್ತರಿಸಬಹುದು. ಹಾಗೇ ಕರುಣವನ್ನು ಸ್ವಲ್ಪ ವಿಸ್ತರಿಸಬಹುದು. ಆದರೆ ಹೆಚ್ಚು ಕಾಲ ಅಲ್ಲ.

ಆದರೆ ಎಲ್ಲ ರಸಗಳಲ್ಲಿ ಶೃಂಗಾರವನ್ನು ಹೆಚ್ಚು ವಿಸ್ತರಿಸಬಹುದು. ಪಾತ್ರಗಳ ಸುತ್ತು ಆವರಣ ನಿರ್ಮಾಣಮಾಡಬಹುದು. ಆದುದರಿಂದ ನಾಟ್ಯ ಶಾಸ್ತ್ರಕಾರನಂತೆ ಶೃಂಗಾರ ಮತ್ತು ವೀರ ಮುಖ್ಯರಸಗಳು. 'ಆಹಾ, ನನ್ನ ಪ್ರಿಯ ಎಂತಹ ಸೊಗಸುಗಾರ !' ಎನ್ನುವಾಗ ಶೃಂಗಾರದ ಚಿತ್ತವೃತ್ತಿ ತೋರಿಸುತ್ತದೆ.

ತಾನು ಹಾಡು ಹೇಳುತ್ತೇನೆಂದರೆ ಆತ ತಾಳ ಹಿಡಿಯುವನು ಅಡುಗೆ ಮಾಡುವೆನೆಂದರೆ - ತರಕಾರಿ ಹೆಚ್ಚುವನು.

ಕುಣಿಯುವೆನೆಂದರೆ - ಮೃದಂಗ ಬಾರಿಸುವನು.

ಅಲಂಕಾರ ಮಾಡುವೆನೆಂದರೆ - ಕನ್ನಡಿ ಹಿಡಿಯುವನು

ಪಗಡೆ ಆಡುವೆನೆಂದರೆ - ಆಡಿ, ಸೋತು, ನಾನು ಗೆದ್ದಂತೆ ತೋರಿಸುವನು.

ಹೀಗೆ ತನ್ನ ಪ್ರಿಯ ಸೊಗಸುಗಾರನೆನ್ನಲು - ಸಾಕಷ್ಟು ವಿವರಗಳನ್ನು ಕೊಡಬಹುದು.

ಹೀಗೆ ಮಾನವರು ಯಾವ ಸ್ಥಳದಲ್ಲಿ ಹೆಚ್ಚು ನಿಲ್ಲಬಲ್ಲರೋ ಆ ಎಳೆ ಹಿಡಿದು, ಆ ನಿಲ್ಲಬಹುದಾದ ಸ್ಥಳ - ಶೃಂಗಾರ

ಎಲ್ಲಿ ನಿಲ್ಲಬೇಕೋ - ಅದು ಶಾಂತರಸ. ಶೃಂಗಾರದಲ್ಲಿ ಸಮಾಜ ಸುಧಾರಣೆಯ ಭ್ರಮೆ ಬೇಡ. ಆದರೆ ಸಮಾಜಕ್ಕೊಂದು ಸಾಂತ್ವನ, ಸತ್ಪ್ರೇರಣೆ, ಸಂತೋಷ ಕೊಡಬಲ್ಲ ಸಾಮರ್ಥ್ಯ, ಶಕ್ತಿ, ಶೃಂಗಾರದಲ್ಲಿದೆ. ಧನಂಜಯ ಹೇಳುವಂತೆ - ಆನಂದ ಕೊಡುವ ಕಲೆಯಲ್ಲಿ ಉಪದೇಶ ಅಪೇಕ್ಷಿಸಬಾರದು. ಉಪದೇಶವಿದ್ದರೂ ಅದು ಆನುಷಂಗಿಕ. ಆನಂದ ಇಂದ್ರಿಯಾತೀತವಾದುದು.

ಹೀಗೆ ಶೃಂಗಾರ ಬಹು ಮಧುರವಾದ ರಸ. ಈ ಶೃಂಗಾರದ ಹರಹು ವಿಸ್ತಾರ.

ಮನೆಯಲ್ಲಿ ಎಲ್ಲ ಕೋಣೆಗಳಿಗೂ ವಿಶಿಷ್ಟವಾದ ಅರ್ಥವಿದೆ. ಆದರೆ ಚಾವಡಿ - ಡ್ರಾಯಿಂಗ್ ರೂಂ ಸದಾ ವಿಶ್ರಾಂತಿ ಪಡೆಯುವ ಸ್ಥಳ. ಅಂತೆಯೇ ಶೃಂಗಾರ; ಕಲೆ ಅದೇ ರೀತಿ.

ಶಾಕುಂತಲದಲ್ಲಿ ಎಲ್ಲ ಘಟನೆಗಳನ್ನು ಗಮನಿಸಿದಾಗ ಕೆಲವು ವಿಶೇಷ ಸಂಗತಿಗಳನ್ನು ಗಮನಿಸಬೇಕು.

ಮೊತ್ತಮೊದಲ ಘಟನೆ ದೂರ್ವಾಸನ ಶಾಪ. ಈ ಶಾಪವನ್ನು ಆಧಿ ದೈವಿಕವಾಗಿ ಭಾವಿಸಬಹುದು. ನಾಟಕದಲ್ಲಿ ಇದೊಂದು ಅಲೌಕಿಕ ಘಟನೆ. ಕೇಂದ್ರಭೂತ ಘಟನೆ.

'ಆಹ್ - ಅತಿಥಿ ಪರಿಭಾಮಿನಿ' ಅತಿಥಿಯನ್ನು ಅಪಮಾನ ಮಾಡಿದಿಯಲ್ಲ ! ಹಾಗಾಗಿ 'ನತಬೋಧಿತಂ ತಥಾಂ ಪ್ರಮತ್ತ: ಅರ್ಥಾತ್ ನೀನು ಎಷ್ಟೆಷ್ಟು ಯಾರ ಸ್ಮರಣೆ ಮಾಡುತ್ತೀಯೋ ಅಷ್ಟಷ್ಟೂ ಆತ ಮರೆಯಲಿ ಎಂದು ಶಾಪವಿತ್ತ.

ವಾಸ್ತವವಾಗಿ ದುಷ್ಯಂತನಲ್ಲೇ 'ಮರವೆ' ಇದೆ. ಲೌಕಿಕವಾಗಿ ಈ ಅರ್ಥವೂ ತೆಗೆದುಕೊಳ್ಳಬಹುದು. ಅಥವಾ ದೂರ್ವಾಸನ ಶಾಪವನ್ನು ಅಲೌಕಿಕವಾಗಿಯೂ ಪರಿಗಣಿಸಬಹುದು. ಹೀಗೆ ಕಾಳಿದಾಸನು 'ಅಭಿಜ್ಞಾನ ಶಾಕುಂತಲ'ದಲ್ಲಿ ಯಾವ ಕಾಲಕ್ಕೂ ಹೊಂದಿ ಕೊಳ್ಳುವಂತೆ ಘಟನೆಗಳನ್ನು ಜೋಡಿಸಿದ್ದಾನೆ.

ಬದುಕಿನಲ್ಲಿ ವಿಶೇಷವಾದ ತತ್ವಗಳೆಂದರೆ ಕಾಮ ಮತ್ತು ಸಾವು. ಕಾಮ ಬಯಕೆಗಳನ್ನು ಪ್ರಚೋದಿಸುತ್ತದೆ, ಸಾವು ಬದುಕಿಗೆ ಅಂತ್ಯ ನೀಡುತ್ತದೆ. ಎಲ್ಲಕ್ಕೂ ಕಾಮಬೇಕು ಹಾಗೇ ಸಾವೂ ಬೇಕು. ಸಾವಿನ ಮುಖ ರೌದ್ರ ಕ್ರೋಧ ವೇದದಲ್ಲಿ ಹೇಳಿದಂತೆ.

'ನಾನು ಮಾಡಿದ್ದಲ್ಲ ಕಾಮ ಮಾಡಿದ್ದು,

ನಾನು ಮಾಡಿದ್ದಲ್ಲ ಕ್ರೋಧ ಮಾಡಿದ್ದು - ಹೀಗೆ ಕಾಮ ಕ್ರೋಧಗಳಿಂದಲೇ ಜಗತ್ತು ನಡೆದಿದೆ. ಎಂದು ತಿಳಿಯಬೇಕು. ದುಷ್ಯಂತ ಶಕುಂತಲೆಯರ ಕಾಮ ವಿಜೃಂಭಿಸಿದಾಗ ದೂರ್ವಾಸನ ರೂಪದಲ್ಲಿ ವಿಧಿಯ ಮನ್ಯು ಉದ್ದೀಪ್ತವಾಗಿ ಬಂದು ಈ ವೇಗಕ್ಕೆ ಸ್ತಂಭಕವಾಯಿತು. 'ತಾನುಂಟು ಮೂರು ಲೋಕವುಂಟು' ಹೀಗೆ ಭಾವಿಸಿದುದರಿಂದಲೇ ದುಷ್ಯಂತನಿಗೆ ಆಘಾತವಾಯಿತು. ಶಕುಂತಲೆ ಅತಿಥಿಗಳ ಪರಿಚರ್ಯೆಗೇ ನಿಯುಕ್ತಳಾದಳು. ಆದರೆ ಯಾವಾಗ ಅವಳಲ್ಲಿ ಕರ್ತವ್ಯ ಲೋಪವುಂಟಾಯಿತೋ ಆಗ ಅನಾಹುತವಾಯಿತು. ಬಯಕೆಗಳು ಕರ್ತವ್ಯವನ್ನು ಮೀರಿದರೆ ಆಘಾತ ಖಂಡಿತ.

ಯಾವಾಗ ಪ್ರೀತಿ ವಿಶ್ವಾಸಗಳು ಸರ್ವತೋಮುಖವಾಗಿ ಹರಡುತ್ತವೆಯೋ ಆಗ ನಮ್ಮ ಎಲ್ಲ ಬಯಕೆಗಳೂ ಈಡೆರುತ್ತದೆ ಎನ್ನುತ್ತನೆ ಕಾಳಿದಾಸ. ಆದುದರಿಂದ ಕಾಳಿದಾಸ ಶೃಂಗಾರ ಕವಿ ಎನ್ನುವುದಕ್ಕಿಂತಲೂ ಆತ ಧರ್ಮ ಕವಿ. ಧರ್ಮ ಅಂದರೆ ಕರ್ತವ್ಯ ತತ್ಪರತೆ.

ಕುಮಾರ ಸಂಭವದಲ್ಲಿ ಶಿವನ ಪ್ರಾಪ್ತಿಗಾಗಿ ಪಾರ್ವತಿ ಕಂಠಮಟ್ಟದ ನೀರಿನಲ್ಲಿ ಚಳಿಯಲ್ಲೂ ತಪಸ್ಸು ಮಾಡುತ್ತಿದ್ದಾಗ ರಾತ್ರಿ ಕವಿಯಿತು. ಚಕ್ರವಾಕ ಪಕ್ಷಿಗಳು ಕಣ್ಣು ಕಾಣದೆ ಜೊತೆಗಾರನಿಗೋಸ್ಕರ ವಿಲಪಿಸುತ್ತಿರುವಾಗ ಪಾರ್ವತಿಗೆ ಅವರ ಮೇಲೆ ಸಹಾನುಭೂತಿ ಉಂಟಾಗಿ ತನ್ನ ವಿರಹವೇ ಹೆಚ್ಚಲ್ಲ. ತನ್ನ ದುಃಖವೇ ವಿಶೇಷವಲ್ಲ. ತನ್ನಂತೆ ಅನೇಕರು ದುಃಖ ಅನುಭವಿಸುತ್ತಿದ್ದಾರೆ ಎಂದು ಅರಿವಾಯಿತು. ಅವಳ ಆ ವಿಶಾಲ ಮನೋಭಾವನೆ ತಿಳಿದ ಮಹೇಶ್ವರನು ಅವಳನ್ನು ವರಿಸುತ್ತಾನೆ. ಹೀಗೆ ಇನ್ನೊಬ್ಬರ ದುಃಖವನ್ನು ಅರಿತರೆ ದೇವರ ಸಹಾಯ ಸಿಗುತ್ತದೆ ಎನ್ನುತ್ತಾನೆ ಕಾಳಿದಾಸ.

ಶಕುಂತಲೆ ದುಷ್ಯಂತನ ಆಸ್ಥಾನಕ್ಕೆ ಹೋದಾಗ ಅವಳನ್ನು ಗುರುತಿಸದೆ ಓಡಿಸಿ ಬಿಟ್ಟ. ಶಕುಂತಲೆ ಹತಭಾಗಿನಿ. ಅವಳು ಗರ್ಭವತಿಯಾಗಿರುವುದನ್ನು ತಿಳಿದು ನೊಂದ ಆಸ್ಥಾನ ಪುರೋಹಿತನು ತನ್ನ ಮನೆಯಲ್ಲಿ ಅವಳನ್ನು ಇಟ್ಟುಕೊಂಡು ಪುತ್ರೋದಯವಾದಾಗಲಾದರೂ ದುಷ್ಯಂತನು ಗುರುತಿಸಬಹುದೆಂದ. ಆದರೆ, ಹಾಗೆ ನಡೆಯಲಿಲ್ಲ. ಮೇನಕೆ ಬಂದು ಶಕುಂತಲೆಯನ್ನು ಕೊಂಡೊಯ್ಯುತ್ತಾಳೆ.

ವಾಸ್ತವ ಮತ್ತು ಆದರ್ಶ ಇವುಗಳನ್ನು ಮೇಳವಿಸಿದಾಗ ಕೃತಿಗಳಿಗೆ ಮಹತ್ವ ಬರುತ್ತದೆ.

ನಮ್ಮ ಭಾರತದ ಮಹಾನ್ ಪರಂಪರೆಯಲ್ಲಿ ಮೂರು ಸ್ತರಗಳಲ್ಲಿ ನಾವು ಬದುಕನ್ನು ನೋಡುತ್ತೇವೆ.

೧. ಅಧಿಭೂತ, ೨. ಅಧಿದೈವ, ೩. ಅಧ್ಯಾತ್ಮ.

ಯಾವಾಗ ಈ ಮೂರೂ ಸ್ತರಗಳು ಕೃತಿಯಲ್ಲಿ ಕಂಡು ಬರುತ್ತವೋ ಆಗ ಆ ಕೃತಿ ಮಹಾಕಾವ್ಯವಾಗುತ್ತದೆ. ನಮ್ಮ ಪ್ರಾಚೀನ ಕವಿಗಳು ಈ ಮೂರನ್ನು ಅಳವಡಿಸಿದ್ದಾರೆ. ರಾಮಾಯಣದಲ್ಲಿ ಅಧಿಭೂತದಲ್ಲಿ ಅಯೋಧ್ಯೆ, ಕಿಷ್ಕಿಂಧೆ ಮತ್ತು ಲಂಕೆಯ ವಿಚಾರ ಬಂದರೆ ಅಧಿ ದೈವದಲ್ಲಿ ಮನುಷ್ಯಾತೀತ ಕೆಲಸ ಹೇಗೆ ನಡೆಯುತ್ತದೆ? ಎಂಬುದೂ ಬರುತ್ತದೆ. ಅಂತೆಯೇ ಅಧ್ಯಾತ್ಮದಲ್ಲಿ ನಮ್ಮಲ್ಲೇ ನಾವು ಸತ್ಯವನ್ನು ಕಂಡುಕೊಳ್ಳುತ್ತೇವೆ.

ಹಾಗೆಯೇ ಕಾಳಿದಸನೂ ಅಭಿಜ್ಞಾನ ಶಾಕುಂತಲದಲ್ಲಿ ಈ ಮೂರು ಸ್ತರಗಳಿಗೆ ಮಹತ್ವನೀಡಿ ಪ್ರತಿಪಾದಿಸಿದ್ದಾನೆ.

ದುಷ್ಯಂತನು ಉಂಗುರು ಸಿಕ್ಕಿದಾಗ ಬಹಳ ಪರಿತಾಪ ಪಡುತ್ತಾನೆ. ಅವನ ರಾಜ್ಯದಲ್ಲೇ ವರ್ತಕನೊಬ್ಬನ ಮರಣವಾದಾಗ ಅವನ ಸಂಪತ್ತನ್ನು ಯಾರಿಗೆ ಕೊಡುವುದು? ಎಂಬ ಪ್ರಶ್ನೆ ಬಂತು. ವರ್ತಕನಿಗೆ ಮಕ್ಕಳಿರಲಿಲ್ಲ. ಆಗ ದುಷ್ಯಂತನು ಆ ವರ್ತಕನ ಪತ್ನಿಯರಲ್ಲಿ ಯಾರಾದರೂ ಗರ್ಭಿಣಿಯರಿದ್ದಾರೆ ಅವರಿಗೆ ಸಲ್ಲಿಸಿರಿ ಎಂದು ಆದೇಶ ವಿತ್ತನು.

ಆಗ ಮಾತಲಿ ಬಂದು (ಪುಟ 10ಕ್ಕೆ)

# सुभाषितानि SUBHAASHITAANI
## Words of Wisdom

आयुषः क्षण एकोऽपि सर्व रत्नैर्न लभ्यते ।
नीयते तद् वृथा येन प्रमादी सुमहानसौ ।।

Aayushah kshana ckopi sarvaratnairna labhyate
Neeyate tad vrthaa yena pramaadee sumanhhnasi

Even a single moment of life (once gone) cannot be got by all the jewels (i.e. cannot be got in exchange for all the wealth on earth). Hence the one who spends it wastefully is indeed doing a blunder. It is rightly said that time and Tide wait for none. It is indeed a crime to waste even a moment of our life which is so very precious.

आलस्यं हि मनुष्याणां शरीरस्थो, महारिपुः ।
नास्त्युद्यमसमो बन्धुः कृत्वा यं नावसीदति ।।

Aalasyam hi mandushyaanaam Saree rastho Mahaari puh
Naastyudyama samo bandhuh krt vaa yam naa vaseetati

Lethargy (laziness) is indeed the greatest inbuilt enemy in man. There is no friend like, enterprise in man, embarking on which once never has a downfall.

आशा नाम मनुष्याणां काचिदाश्चर्य श्रृङ्खंला ।
यया बद्धा तु धावान्ति मुक्तास्तिष्ठन्ति पंगुवंत् ।।

Aashaa naama Manushyaananm
Kaachidaascharya Srunkhalaa
Yayaa baddhaa tu dhaavanti
Muktaasthishtthanti panguvat

The thing called 'desire' in people is indeed a unique chain. It is so because those who are bound by it run around and those who are free from it stay motionless like a lame person.
While those who are normally chained stay at one place, the ones unchained run around by desires, hanker after them but those who are free from desires stay at peace with themselves. Hence the poets calls 'desire' a unique and strong chain.

अहो किमपि चित्राणि चरित्राणि महात्मनाम् ।
धनं तृणाय मन्यन्ते तद्भारेण नमन्त्यपि ।।

Aho kimapi chitraani Mahaatman aam
Dhanam trunaaya manyante Tadbhaarena namantyapi

Wonderful indeed is the character of great men. They look upon wealth as mere grass i.e. They do not attach too much importance to it yet if they possess it, they bend by its weight i.e. they are most humble when endowed with wealth.

नारिकेलसमाकाराः दृश्यन्तेऽपि हि सज्जनाः ।
अन्ये बदरिकाकाराः बहिरेव मनोहराः ।।

Naarikela Samaakaaraah drusyantepi hi sajjanaan
Anye badarikaakaarah bahireva manoharaah

The noble men are like coconuts, very crude in appearance but very good, useful and well meaning from inside. Other people are like jujube fruits which are only good in appearance. They are neither useful nor tasty.
We must not go only by appearances while passing judgment on anybody. That is why, it is said appearance can be deceptive or the proverb 'All that glitters is not gold''.

मनस्येकं वचस्येकं कर्मण्येकं महात्मनाम् ।
मनस्यन्यत् वचस्यन्यत् कर्मण्यन्यत् दुरात्मनाम् ।।

Manasyekam vachasyekam karmanyekan Mahaatmanaam
Manasyanyat vachasyanat karmanyanyat duraatmanaam

This verse explains the unity in the thoughts, words and actions of the good people. Good people speak what they think and do what they speak. It is different in the case of wicked people. They think something, speak something else and their actions are still more different. There is to say that good people are trust worthy due to the unanimity in their thoughts, words and actions and the wicked people being the opposite are hypocritical and untrustworthy.

विद्या विवादाय धनं मदाय
शक्तिस्तु तेषां परपीडनाय ।
खलस्य साधो विपरीतमेतत्
ज्ञानाय दानाय च रक्षणाय ।।

Vidya Vivaadaaya dhanam Madaaya
Saktishtu teshaam parapeedanaaya
Khalasya Sadhor vipareetametad
Jnyaanaaya daanaaya cha rakshanaya

In the world we come across both wicked and good people endowed with education, wealth and physical strength or power. The difference lies in the way they put them to use. The wicked people use their education for unnecessary arguments, wealth for exhibiting arrogance and strength or power to inflict pain on others. The good people use their education for gaining knowledge, Wealth for charity and strength or power to protect other weaker people.

तक्षकस्य विषंदन्ते मक्षिकायास्तु मस्तके ।
वृश्चिकस्य विषं पुच्छे सर्वाङ्गे दुर्जनस्य तु ।।

Takshakasya Visham dante, makshikaayaastu mastake
Vryschikasya Visham puchhe, sarvaange durjanasya tu

A dragon has poison in its teeth, a fly in its head, a scorpion has it in its tail but in a wicked person, the poison runs in every part of the body. So we can imagine how much more dangerous a wicked person is as compared to the other poisonous living being.

*-Compiled by* ***Mrs. Janaki S. Mani***
*Mumbai*

# ಸಮಾಧಿ - ಯೋಗಶಾಸ್ತ್ರವು ತಿಳಿಸಿದಂತೆ

✍ ವಾಸುದೇವ ಕಾಣೆಮಾರ್

ಸಾಮಾನ್ಯವಾಗಿ ನಾವಿಂದು ಸಮಾಧಿಗಳೆಂದರೆ ಸತ್ತವರ ಸುಖನಿದ್ರೆಗಾಗಿ ಮಾಡಿದ ಗೋರಿ, ಅಥವಾ ಅಲ್ಲಿ ಸತ್ತವರನ್ನು ಹುಗಿದು ಸ್ಮಾರಕವೆಬ್ಬಿಸಿದ ಬಸದಿ ಕಟ್ಟಡ ಎಂದು ಅರ್ಥಮಾಡಿಕೊಳ್ಳುತ್ತೇವೆ. ಆದರೆ ಹಿಂದೆ ಅಂಥದಕ್ಕೆ 'ಹೊಸ ಸ್ಥಳ'ವೆಂದಷ್ಟೆ ಹೇಳುತ್ತಿದ್ದರು. ಯೋಗ ನಿದ್ರೆಯಲ್ಲಿ ಮೈಮರೆದ ಸಾಧು ಸಂತರು ನೆಲೆಸಿದ ಸ್ಥಳವನ್ನಷ್ಟೆ ಸಮಾಧಿ ಎಂದೆನ್ನುತ್ತಿದ್ದರು., ದೇವಧ್ಯಾನದಲ್ಲಿ ಮೈಮರೆದವರು ಭಾವ ಸಮಾಧಿಯಲ್ಲಿರುತ್ತಾರೆ ಎಂದು ಹೇಳುವಾಗ ಸಮಾಧಿಯು ಏಕಾಗ್ರ ಮನಸ್ಸಿನಿಂದ ಆಧ್ಯಾತ್ಮಿಕ ಪ್ರಗತಿಗೊಂಡವರಿಗೆ ಅದೊಂದು ಭಕ್ತಿ ತನ್ಮಯರಾಗಿರಲು ಮಾಡುವ ಸಾಧನೆಯೆಂದು ತಿಳಿಯುತ್ತಿದ್ದರು. ಸಮಾಧಿಯು ಯೋಗಾಭ್ಯಾಸದ ಒಂದು ಅಂಗ.

ಪತಂಜಲಿಯು ಬರೆದ 'ಯೋಗ ಸೂತ್ರ'ದಲ್ಲಿ ಸಮಾಧಿಯು ಅಷ್ಟಾಂಗ ಯೋಗಾಭ್ಯಾಸದ ಅಂತಿಮ ಸ್ಥಿತಿ. ಶಮೆದಮಗಳ ಸಾಧನೆ ಮೊದಲ್ಗೊಂಡು ಆಸನ - ಪ್ರಾಣಾಯಾಮ ಮಹಿಸಿ ಪ್ರತ್ಯಾಹಾರ -ಧಾರಣೆ - ಧ್ಯಾನಗಳ ಅವಸ್ಥೆಗೆ ಹೋಗಿ ಕೊನೆಗೆ ಸಮಾಧಿಯನ್ನು ಸೇರಬೇಕು ಎಂದಿದೆ.

ಧ್ಯಾನದಲ್ಲಿ (Meditation) ಏಕಾಗ್ರಮನಸ್ಸಿನಿಂದ ತಲ್ಲೀನವಾಗಿ ಯೋಚಿಸುವ ನಿಧಿಧ್ಯಾಸವು ಮೈಮರೆಸುವ ಭಾವಸಮಾಧಿಯಾಗಿರುವುದು. ಕವಿಗಳು ಉಲ್ಲೇಖಿಸುವ ಭಾವ ಸಮಾಧಿಯದು ಯೋಗಶಾಸ್ತ್ರದಲ್ಲಿ ತಿಳಿದಿರುವ ಅಂತಿಮ ಸಮಾಧಿಯಲ್ಲ. ಧ್ಯಾನಕ್ಕೆ ಮೊದಲು ಚಿತ್ತಸ್ಥೈರ್ಯ ಹಿಡಿದಿಡುವುದು ಧ್ಯೇಯವನ್ನು ಪ್ರತಿಪಾದಿಸುವ ಧಾರಣಾವಸ್ಥೆ. ಯೋಗಶಾಸ್ತ್ರದಲ್ಲಿ ಧ್ಯಾನವು ತಪ್ಪಿನಂತೆ ಪ್ರಖರವಾದಾಗ ಅದಕ್ಕೆ ದಿವ್ಯಫಲಸಿದ್ಧಿಯಾಗುವುದು ಎಂದು ಹೇಳಿದೆ (ಹಠಯೋಗದಲ್ಲಾಗಲಿ ಮನೋಯೋಗದಲ್ಲಾಗಲಿ). ಆ ಫಲವೂ ಬೇಡವೆಂದು ನಿಷೇಧಿಸಿ ಮುಂದುವರಿದರೆ ಕೊನೆಗೆ ಸಿಗುವುದು ಸಮಾಧಿ ಸ್ಥಿತಿ. ಸಮಾಧಿಯಲ್ಲಿ ಮನಸ್ಸು ಸಮತಳಕ್ಕೆ ಬಂದಂತೆ ನಿಶ್ಚಲವಾಗುವುದು ಎನ್ನುವರು.

ಧ್ಯಾನದ ಸ್ವರೂಪವು ಸಂಶಯ ವಿಪರ್ಯಾಸರಹಿತವಾಗಿ ಯಾವ ವೃತ್ತಿಯಿಂದ ತಿಳಿಯಲ್ಪಡುವುದೊ ಅದಕ್ಕೆ ಸಂಪ್ರಜ್ಞಾತ (ಆತ್ಮ ಪ್ರಜ್ಞೆ) ಎಂದು ಹೆಸರು. ಇದರಲ್ಲಿ ಧ್ಯೇಯಾತಿರಿಕ್ತವಾದ ಸಕಲ ವೃತ್ತಿಗಳಿಗೆ ನಿರೋಧ (ಎಂದರೆ ತಡೆ) ಇರುವುದು. ಏಕಮನಸ್ಸಿನ ನೆನಪು ಈ ಪ್ರಜ್ಞೆಯಿಂದ ಬರುವುದಾಗಿ ಅದು ಭಾವ ಸಮಾಧಿಯಾಗುವುದು. ಅಂತಿಮ ಸಮಾಧಿಯ ಸ್ಥಿತಿಯಲ್ಲಿ ಈ ಪ್ರಜ್ಞೆಯೂ ಉಳಿಯದು.

ಯಾವಾಗ ಸ್ಥೂಲವಾದ ಮಹಾಭೂತ ಮತ್ತು ಇಂದ್ರಿಯಗಳನ್ನು ವಿಷಯವನ್ನಾಗಿ ಮಾಡಿಕೊಂಡು, ಇದು ಮೊದಲು, ಅದು ಮತ್ತೆ ಎಂಬ ಅನುಸಂಧಾನದಿಂದ ಭಾವವನ್ನು ಬರಿಸುವುದು ಸವಿತರ್ಕವಾದುದು. ಇನ್ನು ಅಂತಃಕರಣವನ್ನೇ ಅವಲಂಬಿಸಿ ದೇಶ, ಕಾಲ ಮತ್ತು ಧರ್ಮಗಳ ಸಹಿತ ಉಂಟಾಗುವ ಭಾವವು ಸವಿಚಾರವಾದುದು. ಈ ಸವಿತರ್ಕ ಮತ್ತು ಸವಿಚಾರ ಭಾವಗಳನ್ನು ಮೀರಿ ಚಿತ್‌ಶಕ್ತಿಯು ಮಾತ್ರ ಮೇಲುಗೈಯಾದಾಗ ಅದು ಸಾಸ್ಮಿತ ಸಮಾಧಿಯಾಗುವುದು. ಅಲ್ಲಿ ಆನಂದವು ನೆಲೆಸಿದರೆ ಸಾನಂದ ಸಮಾಧಿಯೆನ್ನುತ್ತೇವೆ.

ನಿರ್ವಿಕಲ್ಪವಾದ ಸಮಾಧಿ ಸ್ಥಿತಿಯಲ್ಲಿ ಸಾಧಕನು ನಿಸ್ಪಂದೇಹಿಯಾಗಿ ಪರಮಾತ್ಮನೊಡನೆ ತಾದಾತ್ಮ್ಯ ಹೊಂದುತ್ತಾನೆ. ಅದು ನಾವೆನ್ನುವ ಸಂಸಾರತಾರಕ ಮೋಕ್ಷಸ್ಥಿತಿ. ಹಾಗಾದಾಗ ಸಾಧಕನು ಸವಿಚಾರ, ಸವಿಕಲ್ಪ, ಸಾನಂದ ಮೊದಲಾದ ಪ್ರಜ್ಞೆಗಳನ್ನು ಉಳಿಸಿಕೊಳ್ಳಲಾರ. ಇದಕ್ಕಿಂತಲೂ ನಿರಂತರ ಧ್ಯಾನದ ಸಾಧನೆಬೇಕು. ಆ ಸಾಧನೆಯ ಸ್ಥಿತಿಯಲ್ಲಿ ಸಾಕ್ಷಾತ್ಕರಿತ ಏಕಾಗ್ರ ಪ್ರಜ್ಞೆಯನ್ನು ಕಳೆದುಕೊಳ್ಳದೆ ಯಾರೂ ಅನಿರ್ಬಂಧಿತವಾಗಿ ಸಂಚರಿಸಲಾರರು. ಆಗ ಯೋಗಿಯು ಐಹಿಕ ಜೀವನದ ಅಥವಾ ಪ್ರಾಪಂಚಿಕವಾದ ಕರ್ಮಗಳ ಪಳೆಯುಳಿಕೆಗಳನ್ನು ಒಂದೊಂದಾಗಿ ಕಳೆದುಕೊಳ್ಳುತ್ತಾನೆ. ಆದಾಗ್ಯೂ ಕೆಲವು ಸೂಕ್ಷ್ಮ ಶರೀರದ ಮತ್ತು ಕಾರಣ ಶರೀರದ ಕರ್ಮಗಳನ್ನು ಸವೆಸಬೇಕಾದುದು ಇನ್ನೂ ಉಳಿದಿರಬಹುದು. ಪ್ರಾಣವನ್ನು ಪರಮಾತ್ಮನಲ್ಲಿ ಅನುಸಂಧಾನ ಮಾಡಿ ಉಪಸಂಹರಿಸಿ ದಿವ್ಯ (ದೇವ)ನಾಗುವುದು ಅಂತಿಮ ಸಮಾಧಿಯಲ್ಲಿದೆ.

ಪರಮಾತ್ಮನು ಜೀವಾತ್ಮನೆಂಬ ತನ್ನೊಂದು ಪಾದ (ಅಂಶ)ವನ್ನು ಶರೀರಿಯಲ್ಲಿ ಬಿಟ್ಟಿರುವಾಗ ಅದನ್ನೇ ಮೇಲೆತ್ತಿಕೊಂಡು ಪ್ರಾಣಯು ಹಾರಾಡತೊಡಗಿದರೆ ಅದಕ್ಕೆ ಅಖಂಡ ಬ್ರಹ್ಮಾಂಡದಲ್ಲಿ ತನ್ಮಯತಾಭಾವವು ಉಳಿಯುತ್ತದೆ. ಅದನ್ನು ಸಮಾಧಿಸ್ಥಿತಿಯೆಂದೂ ಹೇಳುತ್ತಾರೆ. ನಮ್ಮ ಮನಸ್ಸನ್ನು ಪರಮಾತ್ಮನೆಡೆಗೆ ತಿರುಗಿಸಿ ಅವನನ್ನು ನಮ್ಮ ಆತ್ಮದಲ್ಲಿ ಸಾಕ್ಷಾತ್ಕರಿಸಿಕೊಂಡರೆ ವಿಶ್ವವಿಜ್ಞಾನವು ತಾನಾಗಿಯೇ ತಿಳಿದು ಹೋಗುತ್ತದೆ. ಆದರೂ ನಿರ್ವಿಕಲ್ಪ ಸಮಾಧಿ ಸಿಗುವಾಗ ಚಿತ್‌ಶಕ್ತಿಯು ಮೇಲುಗೈಯಾದಾಗ ವಿಜ್ಞಾನವನ್ನು ಪರಿತ್ಯಜಿಸಿ ಸಾಸ್ಮಿತ ಸಮಾಧಿ ಯಾಗುವುದು.

ದೇವಸೇವೆ, ಭಗವಂತನಿಗಾಗಿ ಕಾಮನೆ, ಸಂಪರ್ಕ ಇವೆಲ್ಲ ಉಪಾಸನಾತ್ಮಕವಾದ ಗಲಭೆಗಳು ಈಶ್ವರನ ಬಳಿ ಸಾರಿದ ಹಾಗೆಲ್ಲ ಆಡಂಬರ ಕಳೆದು ಕಮ್ಮಿಯಾಗಿ ಹೋಗುತ್ತವೆ. ಆಧ್ಯಾತ್ಮಿಕ ಸಾಧನೆಯ ಯಾತ್ರೆಯಲ್ಲಿ ಮೊದಲು ಭಾವ ಸಮಾಧಿಯ ವಿವಿಧ ಹಂತಗಳನ್ನು ದಾಟಿಯೇ ಅಂತಿಮ ಸಮಾಧಿಯನ್ನು ಸೇರ ಬೇಕಾಗುತ್ತದೆ. ಭಾವ ಸಮಾಧಿಯ ಇಂತಹ ಮೂರ್ಛಾವಸ್ಥೆ (Trance)ಗಳಲ್ಲಿ ಬೀಳುತ್ತಿರುವ ಸಾಧಕರು ಜನರಿಗೆ ತಾವು ತಿಳಿದ ದಿವ್ಯ ಮಾರ್ಗಗಳನ್ನು ಉಪದೇಶಿಸುವ ಕ್ರಿಯೆಯನ್ನ ಆಗ ನಿಲ್ಲಿಸಿ ಬಿಡುವರು. ಸಮಾಧಿ ಗತಿಶೀಲವಾದ ಬಳಿಕ ಅವರ ಶರೀರವು ಸ್ಥಾಯಿಕವಾಗಿ ನಿಲ್ಲುವುದಿಲ್ಲ. ದಿವಂಗತ ರಾಮಕೃಷ್ಣ ಪರಮಹಂಸರು ಭಜನೆ ಮಾಡುತ್ತ ಮಾಡುತ್ತ ಚಿತ್ರಪ್ರತಿಮೆಯಂತೆ ನಿಲ್ಲುತ್ತಿದ್ದರೆನ್ನುವುದು ಇದಕ್ಕೊಂದು ಉದಾಹರಣೆ. ಕಣ್ಣೀರು ಸುರಿಸುತ್ತ ದೇವಿಯನ್ನು ಯಾಚಿಸುವವರು ಮತ್ತೆ ಅಶ್ರುಹೀನವಾಗಿ ಮೌನವಾಗಿ ಬಿಡುತ್ತಿದ್ದರಲ್ಲದೆ ಅವರ ದೃಷ್ಟಿಯೂ ಸ್ಥಿರವಾಗುತ್ತಿತ್ತು. ಮೈಯು ಕಟ್ಟಿಗೆಯಂತಾಗುತ್ತಿರುವಾಗ ಅವರು ಭಾವಾವಿಷ್ಟರಾಗುತ್ತಿರಲಿಲ್ಲ. ಮತ್ತೆ ಎಷ್ಟೋ ಕಾಲದ ನಂತರ ಭಾವ ಸಮಾಧಿಯಿಂದ ತಾನಾಗಿಯೇ ಹೊರಗೆ ಬರುತ್ತಿದ್ದರು ಪ್ರಾಪಂಚಿಕತೆಯ ಕಡೆಗೆ.

ಭಾವ ಸಮಾಧಿಯನ್ನು ಪ್ರಕೃತಿ ಪ್ರೇಮಿಯಾಗಿರುವವನು ಕೆಲಗಾಲ ಪಡೆಬಹುದು. ಆಗ ಜೀವವು ಜಡವಾಗಿ ಆತ್ಮದಲ್ಲಿ ಸಚ್ಚಿದಾನಂದ ಸತ್ವತುಂಬಿ ಧ್ವನಿ ಬರುವುದುಂಟು ಎಂದು ವರ್ಡ್ಸ್‌ವರ್ತ್ ಕವಿಯು ಬರೆದಿಟ್ಟಿದ್ದಾನೆ (Tintern Abbey Lines)

ಮಹರ್ಷಿ ಯೋಗಾನಂದರು (ಯೋಗೋದಾವರು) ಭಾವ ಸಮಾಧಿಯಲ್ಲಿರುವಾಗ ಕೊನೆಕೊನೆಗೆ ವಿಚಿತ್ರವಾದ ರಶ್ಮಿಗಳನ್ನು, ವರ್ಣಗಳನ್ನು, ಘೋಷಗಳನ್ನು, ಸುವಾಸನೆಗಳನ್ನು ತಾನು ಅನುಭವಿಸಿದ್ದುಂಟು ಎಂದು ಹೇಳುತ್ತಾರೆ. ತಾನು ಪದೇ ಪದೇ ಭಾವಸಮಾಧಿಗೆ ಯೋಗದಿಂದಲೇ ಹೋಗಿ ಬರುತ್ತ (ಎಂದರೆ ಭ್ರಮೆಯಿಂದಲ್ಲ) ಕಡೆಗೊಮ್ಮೆ ಅಂತಿಮ ಸಮಾಧಿಸ್ಥಿಗೆ ಖಂಡಿತವಾಗಿ ಹೋಗಲಿದ್ದೇನೆ ಎಂದು ತಮ್ಮ ಅನುಭವವನ್ನು ಬರೆದಿಟ್ಟಿದ್ದಾರೆ. ಒಂದು ಆಧ್ಯಾತ್ಮಿಕ ಯೋಜನೆಯು ನಮ್ಮ ಶರೀರದೊಳಗೆ ಹೊಕ್ಕಂತೆ ಭಾವ ಸಮಾಧಿ ಸ್ತರಿಗೆ ಕಾಣುವುದು ಸಾಮಾನ್ಯವಾಗಿದೆ. ಆದರೆ ಭಾವ ಸಮಾಧಿಯಿಂದ ಒಂದೊಂದು ಸಲವೂ ಹೊರಗೆ ಬರುವಾಗ ಅವರ ಶರೀರವೂ ಇಂದ್ರಿಯಗಳೂ ಎತ್ತರದಿಂದ ಕೆಳಗೆ ದೊಪ್ಪನೆ ಹೊತ್ತು ಹಾಕಿದಂತೆ ಭಾಸವಾಗುವುದೂ ಇದೆ. ಭಾವ ಸಮಾಧಿಯಿಂದ ಬಹುಮುಕ್ತನಾದಾಗ ಪುನಃ ಸಾಂಸಾರಿಕ ಜಂಜಡಗಳನ್ನು ಎದುರಿಸಬೇಕಾಗುತ್ತದೆ. ಆದರೆ ಭಾವ ಸಮಾಧಿಯಲ್ಲಿ ಒಬ್ಬನ ಮಾನಸಿಕ ಸ್ಥಿತಿಯು ನೀರಿನಿಂದ

ಹೊರಗೆ ತೆಗೆದು ಬಂದ ಮೀನನ್ನು ಪುನಃ ನೀರಿನಲ್ಲಿ ಬಿಟ್ಟಾಗ ಅದಕ್ಕೆ ಬರುವ ಸಹಜ ತೃಪ್ತಿಯಂತೆ ಇರುವುದು.

ಭಾವ ಸಮಾಧಿ ಪಡೆದು ಬಂದ ಯೋಗಿಯು ಮತ್ತೆ ಎಲ್ಲಾ ಕಾಲಗಳಲ್ಲೂ, ಎಲ್ಲಾ ಸ್ಥಳಗಳಲ್ಲೂ ಸಂದರ್ಭಗಳಲ್ಲೂ ಏಕಸತ್ಯದರ್ಶನ ಮಹಾಶಾಂತಿ, ಏಕಮತ ಸೌಂದರ್ಯ, ಮತ್ತು ತೃಪ್ತಿಯಿಂದ ಇರುತ್ತಾನೆ. ಆತನಿಗೆ ಎಲ್ಲದರಲ್ಲೂ ಸಮದೃಷ್ಟಿ ಇರುತ್ತದೆ. ಆತನು ಯಾರನ್ನು ಪ್ರತಿಭಟಿಸುವುದಿಲ್ಲ. ಎಲ್ಲರನ್ನು ಪ್ರೀತಿಸುತ್ತಾನೆ ಮತ್ತು ಹಾಗೆಯೇ ಗೌರವಿಸಲ್ಪಡುತ್ತಾನೆ. ಜಗತ್ತಿನ ಭ್ರಾಂತಿಗಳಾದ ಸಿರಿತನ - ಬಡತನ - ಮೇಲು - ಕೀಳು ಇತ್ಯಾದಿಗಳು ಅವನನ್ನು ಬಂಧಿಸುವುದಿಲ್ಲ. ಆತನು ಪರಮಾತ್ಮನನ್ನು ಹೊಂದುವ ಆಶಯದಲ್ಲಷ್ಟೇ ಉಳಿಯುತ್ತಾನೆ.

ಆದರೆ ಒಳ್ಳೆಯ ಯೋಗಾಭ್ಯಾಸಿಗಲ್ಲದೆ ಸುಲಭವಾಗಿ ಇಂಥ ಸಮಾಧಿಯು ಬೇರಾರಿಗೂ ದಕ್ಕುವುದಿಲ್ಲ. ಒಂದು ಸಣ್ಣ ವಿದ್ಯುದ್ದೀಪದ ಬುರುಡೆಯು ಮಿತಿಮೀರಿದ ವಿದ್ಯುತ್ಪ್ರವಾಹವನ್ನು (High Voltage) ಭರಿಸದೆ ಹೇಗೆ ಒಡೆದು ಚೂರಾಗುವುದೋ ಹಾಗೆ ಬ್ರಹ್ಮಾಂಡ ಶಕ್ತಿಯು ಸಮಾಧಿಸ್ಥನಲ್ಲಿ ಬಂದು ಸೇರುವಾಗ ಅದನ್ನು ಭರಿಸಲು ಸಾಮಾನ್ಯರ ನರಗಳು ಸಿದ್ಧವಾಗುವುದಿಲ್ಲ.

ಒಮ್ಮೆ ಭಾವ ಸಮಾಧಿಯು ಬಂದುಹೋದ ನಂತರ ಪುನಃ ಅಂತಹ ಸಮಾಧಿಹೊಂದಲು ಧ್ಯಾನಕಾರ್ಯವನ್ನು ನಿರಂತರವಾಗಿ ಮಾಡುತ್ತಿರಬೇಕಾಗುವುದು. ಧ್ಯಾನದಿಂದ ನೇರವಾಗಿ ಅಂತಹದೇ ಸಮಾಧಿಯೋಗಕ್ಕೆ ಹೋಗಬಹುದು. ಯೋಗಾಭ್ಯಾಸಿಗೆ ಇದು ಸಹಜವಾಗಿ ಬಿಡುತ್ತದೆ. ಈ ಅವಸ್ಥೆಯಲ್ಲಿ ಸರ್ವಸಂಗ ಪರಿತ್ಯಾಗ ರೂಪವಾದ ಅನಿರ್ವಾಚ್ಯವಾದ ತೃಪ್ತಿಯನ್ನು ಆತ ಮತ್ತೆ ಅನುಭವಿಸಲಿಕ್ಕಾಗುತ್ತದೆ.

ಇಲ್ಲೊಂದು ಮಾತು. ಭಾವ ಸಮಾಧಿಯು ಪ್ರತಿಯೊಬ್ಬ ಮಾನವನಿಗೆ ಮಾತ್ರವಲ್ಲ, ಇತರ ಪ್ರತಿಯೊಂದು ಪ್ರಾಣಿಗೂ ಸಾಧ್ಯವಿದೆ. ಅದು ನೈತಿಕ ಏಳಿಗೆಯಿಂದಲೇ ಸಾಧಿಸಬೇಕೆಂದಿಲ್ಲ. ಯೋಗಾಭ್ಯಾಸದಿಂದ ಲಭಿಸವುದು. ಇದೊಂದು ದರ್ಶನದ ಗುಟ್ಟು.

ಯೋಗಾಭ್ಯಾಸಿಗಳು ಎರಡು ಹಿಮ್ಮಡಿಗಳಿಂದಲೂ ಮೂಲವನ್ನು ಭದ್ರವಾಗಿ ಅಮುಕಿಕೊಂಡು ಬಾಯಿಯ ಮೇಲಿನ ಹಲ್ಲುಗಳಿಗೆ ಕೆಳಗಿನ ಹಲ್ಲುಗಳನ್ನು ತಾಕಿಸದೆ ದೃಢಾಸನದಲ್ಲಿದ್ದು ಮೊದಲು ಅಪಾನವಾಯುವನ್ನು ಪ್ರಾಣವಾಯುವಿನೊಡನೆ ಪ್ರಾಣದ ಸ್ವಸ್ಥಾನವಾದ ಹೃದಯದಲ್ಲಿ ನಿಲ್ಲಿಸುವುದಿದೆ. ಅನಂತರವೇ ಮನಸ್ಸನ್ನು ಬುದ್ಧಿಯಲ್ಲಿ ಲೀನಗೊಳಿಸಲು ಬಾಹ್ಯಕುಂಭಕ ಪ್ರಾಣಾಯಾಮ ಮಾಡುವರು. ಈ ರೀತಿಗಳಿಂದ ಯೋಗಿಗಳು ಪರಮಾತ್ಮನನ್ನು ತಮ್ಮ ಹೃದಯ ಗುಹೆಗಳಲ್ಲಿ ಕಂಡುಕೊಳ್ಳುವರು ಎಂದು ಶಾಸ್ತ್ರದಲ್ಲಿ ಹೇಳಿದೆ.

ಸಮಾಧಿಯನ್ನು ಅನೇಕ ಸಿದ್ಧರೂ ಅವಧೂತರೂ ಪಡೆದಿದ್ದಾರೆ. ಸಂತ ಜ್ಞಾನೇಶ್ವರರು ಒಂದು ಗುಹೆಯನ್ನು ಹೊಕ್ಕು ಅಲ್ಲಿ ಅಂತಿಮವಾಗಿ ಸಶರೀರ ಸಮಾಧಿಯನ್ನು ಪಡೆದರು ಎಂದು ಹೇಳಲಾಗುತ್ತದೆ.

ಜೈನ ಶ್ರಮಣರು ಸಲ್ಲೇಖನ ವ್ರತದಂತೆ ಆಮರಣ ಉಪವಾಸದಿಂದಲೇ ತಮಗೆ ಅಂತಿಮ ಸಮಾಧಿ ಸ್ಥಿತಿಯನ್ನು ಮರಣವನ್ನು ಒಟ್ಟಿಗೇ ತಂದುಕೊಳ್ಳುತ್ತಾರೆ. ಇಲ್ಲಿ ನಿರ್ದಿಷ್ಟ ಸ್ಥಳದಲ್ಲಿ ತೃಣದ ಹಾಸಿನಲ್ಲೊರಗಿ ಸಮ್ಯಕ್ ದರ್ಶನಕ್ಕೆ ಕಾತರಿಸುತ್ತ ದೇಹವನ್ನು ತೊರೆದ ಕ್ರಮವಿದೆ.

ಧ್ಯಾನ ಗೈಯುವ ಮನಸ್ಸು ಶಿವ ಸ್ವರೂಪದಲ್ಲಿ ಲೀನವಾಗಿ ಸಂಪೂರ್ಣವಾಗಿ ಸಾಮರಸ್ಯವನ್ನು ಹೊಂದುವುದೇ ಅಂತಿಮ ಸಮಾಧಿ. ದಿವ್ಯವೂ ಮನುಷ್ಯ ಒಂದಾದಾಗಲೇ ಸಮತ್ವವನ್ನು ತರಿಸುವ ಸಮಾಧಿಯಾಗುವುದು. ಅದೇ ಸಾಯುಜ್ಯ. ಆದರೆ ಸಮಾಧಿಯು ಚಿಮರನಿದ್ರೆ ಅಥವಾ ಸಾವು ಎಂಬ ಅರ್ಥದಲ್ಲಿಲ್ಲ. ಅದು ನಿದ್ರಾ ಸ್ಥಿತಿಯಲ್ಲಿ. ಸಂಕೇತನವಾಗಿದೆ. ಅದು ಎಚ್ಚರದೊಳಗೆ ಸಾಧಿಸುವ ನಿದ್ರೆಯಾಗಿದೆ. ಅದೊಂದು ಅತೀಂದ್ರಿಯ ಪ್ರಜ್ಞಾವಸ್ಥಾ ಸ್ಥಿತಿ. ತುರೀಯಾವಸ್ಥೆ ಎಂದೆನ್ನಬಹುದು.

ಸಮಾಧಿಯು ಸಿದ್ಧಿಸಿತೆಂದು ಗೊತ್ತುಮಾಡಿಕೊಳ್ಳಲು ಯಾವ ಸಾಧನವೂ ಇಲ್ಲ. ಅದು ಸಹಜ ಚೇಷ್ಟೆ (Instinct) ಆಗಿ ಬರುವುದಲ್ಲ.

ಸಮಾಧಿಯಲ್ಲಿ ಅಂಹಕಾರದ ಸುಳಿವು ಸ್ವಲ್ಪವೂ ಇರದ ಜ್ಞಾನವಿರುತ್ತದೆ. ಪರಮ ಗಾಢ ಧ್ಯಾನದಿಂದ ಶುದ್ಧ ಚೈತನ್ಯ ಸ್ವರೂಪವಾದವರಿಗೆ 'ಬುದ್ಧ' ಅರ್ಹಂತ (ಅರಿಹಂತ)ವೆನ್ನುವರು.

ಅಜ್ಞಾನದ ಮುಳ್ಳನ್ನು ತೆಗೆದು ಹಾಕಲು ಸುಜ್ಞಾನದ ಮುಳ್ಳನ್ನು (ಅಥವಾ Pin) ಬಳಸಿ ನಿವಾರಣೆಯಾದ ನಂತರ ವಿಜ್ಞಾನ ಅಜ್ಞಾನವೆಂಬ ಎರಡು ಮುಳ್ಳುಗಳನ್ನು ನಮ್ಮಿಂದ ದೂರ ಮಾಡಬೇಕು. ಬ್ರಹ್ಮವು ಜ್ಞಾನ ಮತ್ತು ಅಜ್ಞಾನದ ಆಚೆ ಇರುವುದು ಸಮಾಧಿ ಸ್ಥಿತಿಯಲ್ಲಿ ಚೆನ್ನಾಗಿ ತಿಳಿದುಬರುವುದು., ಯಾವುದನ್ನು ಜ್ಞಾನವೆನ್ನುತ್ತೇವೆಯೊ ಅದು ಜ್ಞಾನಾತೀತವಾದ ಸಮಾಧಿ ಸ್ಥಿತಿಯಿಂದ ಕೆಳಸ್ತರದ್ದು.

ಸಮಾಧಿಯೆಂಬುದು ಒಟ್ಟಿನಲ್ಲಿ ಶ್ರದ್ಧೆ, ಸಾಧನೆ, ಏಕಾಗ್ರತೆ ಮತ್ತು ನಿತ್ಯಾನಿತ್ಯ ವಸ್ತು ವಿವೇಕದಿಂದ ಬರುವಂತಹ ಸಿದ್ಧಿ.

●

## ಡಾ। ರಾ. ಗಣೇಶ್‌ರವರ ಉಪನ್ಯಾಸಗಳು

*(ಪುಟ 7ರಿಂದ)*

ದೇವಲೋಕದಲ್ಲಿ ಯುದ್ಧ ಪ್ರಾರಂಭಿಸಿದೆ. ಅಲ್ಲಿಗೆ ಹೋಗಬೇಕು ಎಂದಾಗ ದುಷ್ಯಂತನು ಹೊರಟನು. ದಾರಿಯಲ್ಲೇ ಶಕುಂತಲೆ ಭರತರ ಭೇಟಿ ಆಗುತ್ತದೆ. ಹೀಗೆ ಪ್ರೀತಿ ಎಂಬುದು ಸ್ವಾರ್ಥಕ್ಕಿಂತ ಮೇಲೆ ಎದ್ದು ಎಲ್ಲರಿಗೂ ಸ್ಪಂದಿಸುವಾಗ ಅದು ಎಲ್ಲರನ್ನು ಒಲಿಸಿಕೊಂಡು ದೈವ ಸಹಾಯ ಪಡೆಯುತ್ತದೆ ಎನ್ನುತ್ತಾನೆ ಕಾಳಿದಾಸ. ಆದುದರಿಂದ 'ನನಗಾಗಿ ಸುಖ ಸುಖಕ್ಕಾಗಿ ನಾನು' ಎನ್ನುವ ಸಂಕುಚಿತತೆ ಇಡಬಾರದು. ಇದು ಕಾಳಿದಾಸನ ಮೌಲ್ಯ ಪ್ರಜ್ಞೆ. ನಿಜವಾದ ಲೇಖಕನು ಲಿಂಗಾತೀತ, ನೋವು ಎಲ್ಲರಿಗೆ ಸಮಾನ. ಕಲೆಗೆ ದೇಶ, ಪ್ರಾಂತ ಭೇದವಿಲ್ಲ. ನಾವು ರಾಗ, ದ್ವೇಷ ಮೀರಿದರೆ ಮಾತ್ರ ಸಂತೋಷ ಪಡಬಹುದು. 'ಸ್ತ್ರೀ ವಾದ' ಎನ್ನುತ್ತಾ ಶಕುಂತಲೆಗೆ ಅನ್ಯಾಯವಾಗಿದೆ ಎಂಬ ದುರ್ವಾದ ಮಾಡಬಾರದು. ಹೃದಯ ಸಂವಾದ ಸಾಧಿಸಬೇಕು. ಕಾಳಿದಾಸನ ಧ್ಯೇಯ ಸಂಮೋಹದಿಂದಾಗುವ ನಷ್ಟ ಮತ್ತು ಪ್ರತಿಬೋಧ ದಿಂದಾಗುವ ಸಮಾಧಾನ ಇದನ್ನು ವಿಶದೀಕರಿಸುವುದಾಗಿದೆ. ಓದುಗರು ನಿರಪೇಕ್ಷ ಮತ್ತು ಸ್ಥಿತ ಪ್ರಜ್ಞ ದೃಷ್ಟಿಯಿಂದ ನಾಟಕವನ್ನು ನಿರೀಕ್ಷಣೆ ಮಾಡಿದಲ್ಲಿ ಸತ್ಯವನ್ನು ಕಂಡುಕೊಳ್ಳಬಹುದು.

ಹಾಗೆ ಮುಗ್ಧತೆ ಮತ್ತು ಮೂಢತೆ ಒಂದೇ ಆಗಿರುತ್ತದೆ. ಸಿಕ್ಕಿದ ಸ್ವಾತಂತ್ರ್ಯವನ್ನು ಶಕುಂತಲೆ ದುರುಪಯೋಗ ಪಡಿಸಿದಾಗ ಸಂಕಷ್ಟದಲ್ಲಿ ಸಿಲುಕಿ ಹಾಕಿಕೊಳ್ಳುತ್ತಾಳೆ. ಆದುದರಿಂದ ಮುಗ್ಧತೆ ಎಂದಿಗೂ ಹಾನಿ ತರುತ್ತದೆ. ಹೊಣೆಗಾರಿಕೆ ಅರಿತು ಕರ್ತವ್ಯ ದಕ್ಷರಾದರೆ ಮಾತ್ರ ಜೀವನಕ್ಕೆ ಒಂದು ಅರ್ಥ ಸಿಗುತ್ತದೆ. ಇಲ್ಲದಿದ್ದರೆ ಅನರ್ಥ ಘಟಿಸುತ್ತದೆ.

ಅತೀ ಸ್ವಾತಂತ್ರ್ಯ ದುರಂತಕ್ಕೆ ಕಾರಣವಾಗುತ್ತದೆ ಎನ್ನುತ್ತಾನೆ ಕಾಳಿದಾಸ.

ರಘುವಂಶದ ಕೊನೆಯ ರಾಜ ಅಗ್ನಿವರ್ಣ ಭೋಗಲಾಲಸೆಯಿಂದ ಪ್ರಜಾರಕ್ಷಣೆಯನ್ನು ಮರೆತು ಬಿಡುತ್ತಾನೆ. ಆತ ರೋಗಕ್ಕೆ ತುತ್ತಾಗಿ ದುರ್ಮರಣ ಕ್ಕೀಡಾಗುತ್ತಾನೆ.

ಹೀಗೆ ಭೋಗ ರೋಗಕ್ಕೆ ಎಡೆ ನೀಡುತ್ತದೆ.

ಕಾಳಿದಾಸನು ಜೀವನದ ಬರ್ಬರವಾದ ಕಹಿಯನ್ನು ಅತಿಸೌಮ್ಯವಾಗಿ, ಲಲಿತವಾಗಿ ತನ್ನ ನಾಟಕ, ಕಾವ್ಯಗಳಲ್ಲಿ ಪ್ರತಿಬಿಂಬಿಸುತ್ತಾನೆ. ಕಾಳಿದಾಸನು ಮೌಲ್ಯ ಪ್ರಜ್ಞೆಯನ್ನು ಉದ್ದೀಪನ ಗೊಳಿಸಿದ್ದಾನೆ.

ಶಾಕುಂತಲದ ಅನುವಾದಗಳು ಅನೇಕ ಇವೆ. ಸುಮಾರು ಇಪ್ಪತ್ತೆರಡು ಅನುವಾದಗಳು ಲಭ್ಯವಿದೆ. ಆದರೆ ಬಸವಪ್ಪ ಶಾಸ್ತ್ರಿಗಳು ಮತ್ತು ಪುತ್ತೂರಿನ ಗಣಪತಿ ಭಟ್ಟ ಮೊಳಿಯಾರ ಇವರ ಅನುವಾದಗಳು ಶ್ರೇಷ್ಠವಾಗಿವೆ.

●

# ಮಹಾರಾಷ್ಟ್ರದ ಭೌಗೋಳಿಕ ವ್ಯಾಪ್ತಿ, ಪ್ರಾಚೀನತೆ

ಭಾಗ ೨

- ಡಾ. ಜೆ.ಎನ್. ಉಪಾಧ್ಯ

ಕರ್ನಾಟಕ ಮತ್ತು ಮಹಾರಾಷ್ಟ್ರ ಇವು ನೆರೆಯ ರಾಜ್ಯಗಳು. ಇವುಗಳ ನಡುವಿನ ಸಂಬಂಧ ಕರುಳು ಬಳ್ಳಿಯ ಸಂಬಂಧ. ಈ ಉಭಯ ರಾಜ್ಯಗಳ ನಡುವಿನ ಆದಾನ ಪ್ರಧಾನವನ್ನು ಅನುಲಕ್ಷಿಸಿ ಡಾ. ಜೆ. ಎನ್ ಉಪಾಧ್ಯ ಅವರು ಸುದೀರ್ಘವಾದ ಲೇಖನವನ್ನು ಬರೆದುಕೊಟ್ಟಿದ್ದಾರೆ. ನಮ್ಮ ನೇಸರು ಪತ್ರಿಕೆಯಲ್ಲಿ ಇದನ್ನು ಎಂಟು - ಹತ್ತು ಭಾಗಗಳಲ್ಲಿ ಪ್ರಕಟಿಸಲಾಗುವುದು. - ಸಂ

ಇಂದಿನ ಭಾರತದಲ್ಲಿ ಮಹಾರಾಷ್ಟ್ರ ರಾಜ್ಯಕ್ಕೆ ತನ್ನದೇ ಆದ ವಿಶೇಷ ಸ್ಥಾನ ಮಾನವಿದೆ. ಭೌಗೋಳಿಕವಾಗಿ ಮಹಾರಾಷ್ಟ್ರ ದೊಡ್ಡದು. ಆದರೆ ಅದಕ್ಕಿರುವ ಇತಿಹಾಸ ಚಿಕ್ಕದು. ಮಹಾರಾಷ್ಟ್ರದ ಸ್ವಂತ ಇತಿಹಾಸ ಆರಂಭವಾಗುವುದೇ ಹದಿಮೂರನೇ ಶತಮಾನದ ಅನಂತರದಲ್ಲಿ. ಮರಾಠಿ ಭಾಷೆಗೂ ಈ ಮಾತು ಅನ್ವಯಿಸುತ್ತದೆ. ಮಹಾರಾಷ್ಟ್ರದ ಪ್ರಾಚೀನ ಇತಿಹಾಸವೆಂದರೆ ಅದು ಪ್ರಾಚೀನ ಕರ್ನಾಟಕದ ಇತಿಹಾಸವೇ ಆಗಿದೆ.

ಮಹಾರಾಷ್ಟ್ರ ಎಂಬ ಪದ ಮೊದಲು ಕಾಣಿಸಿಕೊಳ್ಳುವುದು. ವರರುಚಿಯ ವ್ಯಾಕರಣ ಕೃತಿಯಲ್ಲಿ. ಈತನ ಕಾಲ ಸು. ಕ್ರಿ.ಶ.ದ ಆರಂಭ ಕಾಲ ಎಂದು ನಂಬಲಾಗಿದೆ. ರಾಷ್ಟ್ರವೆಂದು ಈ ದೇಶ ಆ ಕಾಲಕ್ಕೆ ಅಸ್ತಿತ್ವದಲ್ಲಿಲ್ಲದಿದ್ದರೂ ಭಾಷೆಯ ದೃಷ್ಟಿಯಿಂದ ಇದಕ್ಕೆ ಗೌರವದ ಸ್ಥಾನವಿತ್ತೆಂಬುದಕ್ಕೆ ವರ ರುಚಿಯ ವ್ಯಾಕರಣ ಕೃತಿ ಸಾಕ್ಷಿಯಾಗಿದೆ. ಶೇಷಂ ಮಹಾರಾಷ್ಟ್ರೀವತ್ ಎಂಬ ಹೇಳಿಕೆಯಿಂದ ಮಹಾರಾಷ್ಟ್ರೀ ಎಂಬ ಈ ಭಾಷೆ ಪ್ರಮಾಣವೆನಿಸಿತ್ತು ಎಂದು ತಿಳಿದು ಬರುತ್ತದೆ.

ಮಹಾರಾಷ್ಟ್ರ ಎಂಬ ಶಬ್ದ ಪ್ರಾಚೀನ ಕಾವ್ಯಗಳಲ್ಲಿಯೂ ಕಾಣ ಸಿಗುವುದರಿಂದ ಇದೇ ಪ್ರಾಚೀನ ರೂಪವಿರಬೇಕು. ಇದರಿಂದ ಕ್ರಮೇಣ ಮರಹಟ್ಟಿ ಮತ್ತು ಮರ್‍ಹಾಟಿ ಶಬ್ದಗಳು ರೂಪುಗೊಂಡಿರುವ ಸಾಧ್ಯತೆಗಳಿವೆ ಎಂಬುದಾಗಿ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಹೆಚ್ಚಿನ ಮಾಹಿತಿ ನೋಡಿ ಶಂ. ಬಾ. ಜೋಶಿ - ಮರಾಠಿ ಸಂಸ್ಕೃತಿ. (ಅನು ಕೀರ್ತಿನಾಥ ಕುರ್ತಕೋಟಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು 1990) ಮಹಾರಾಷ್ಟ್ರ ಎಂದರೆ ಮಹಾನ್ ರಾಷ್ಟ್ರ ದೊಡ್ಡ ಪ್ರದೇಶ. ಸುಮಾರು ಆರನೆಯ ಶತಮಾನದಲ್ಲಿ ಬರೆಯಲ್ಪಟ್ಟ ಪಾಲೀಗ್ರಂಥ ಮಹಾವಂಶದಲ್ಲಿ ಮಹಾರಾಷ್ಟ್ರದ ಪ್ರಾಕೃತ ರೂಪ ಮಹಾರಟ್ಟ ಎಂಬುದನ್ನು ಉಪಯೋಗಿಸಲಾಗಿದೆ. ಕ್ರಿ.ಶ. ಮೂರನೆಯ ಶತಕದಲ್ಲಿ ಆಗಿ ಹೋದ ಮೊಗ್ಗಲಿ ಪುತ್ತ ತಿಸ್ಸಾ ಎಂಬವನು ತನ್ನ ಧರ್ಮೋಪದೇಶಕರನ್ನು ಮಹಿಷಮಂಡಲ, ಬನವಾಸಿ, ಅಪರಾಂತಕ ಮಹಾರಟ್ಟ, ಸವನ್ನ ಭೂಮಿ ಮೊದಲಾದ ಪ್ರದೇಶಗಳಿಗೆ ಕಳುಹಿಸಿದ್ದನು ಎಂಬುದರ ಉಲ್ಲೇಖವು ಮಹಾವಂಶದ ಹನ್ನೆರಡನೆಯ ಪ್ರಕರಣದಲ್ಲಿದೆ. ಈ ಉಲ್ಲೇಖದಲ್ಲಿಯ ಮಹಿಷ ಮಂಡಲವೆಂದರೆ ನರ್ಮದಾನದಿ ದಂಡೆಯ ಮೇಲಿನ ಮಾಹಿಷ್ಮತಿ ಎಂಬ ಪ್ರದೇಶ. ವನವಾಸ ಎಂದರೆ ಉತ್ತರ ಕನ್ನಡ ಮತ್ತು ಅಪರಾಂತಕ ಎಂದರೆ ಈಗಿನ ಕೊಂಕಣ. ಉತ್ತರಕ್ಕೆ ನರ್ಮದಾ ಪಶ್ಚಿಮಕ್ಕೆ ಕೊಂಕಣ ಮತ್ತು ದಕ್ಷಿಣಕ್ಕೆ ಉತ್ತರ ಕರ್ನಾಟಕ ಇದ್ದು ಇವುಗಳ ನಟ್ಟ ನಡುವಿರುವ ಪ್ರದೇಶವೇ ಮಹಾರಟ್ಟ ಆಗಿರಬಹುದೆಂದು ತೋರುತ್ತದೆ ಎಂಬುದಾಗಿ ಸರೋಜಿನಿ ಬಾಬರ್ ಅವರು ಅಭಿಪ್ರಾಯ ಪಟ್ಟಿದ್ದಾರೆ. (ಮಹಾರಾಷ್ಟ್ರದ ಜನಪದ ಸಾಹಿತ್ಯ ಅನುವಾದ ವಾಮನ ಬೇಂದ್ರೆ, ನ್ಯಾಷನಲ್ ಬುಕ್ ಟ್ರಸ್ಟ್ 1972 ಪುಟ 1) ಪ್ರಾಚೀನ ಕೃತಿಗಳಲ್ಲಿ ಮಹಾರಾಷ್ಟ್ರದ ಉಲ್ಲೇಖ ಅಷ್ಟಾಗಿ ಬಂದಿಲ್ಲ.

೧೩ನೆಯ ಶತಮಾನದಲ್ಲಿಯ ಮಹಾನುಭಾವ ಗ್ರಂಥದಲ್ಲಿ ಮಹಾರಾಷ್ಟ್ರ ಪ್ರದೇಶದ ಬಗ್ಗೆ ಹೀಗೆ ವರ್ಣನೆ ಬರುತ್ತದೆ.

ಪಶ್ಚಿಮ ತ್ರುಂಬಿಕೂ ಪೂರ್ವ ಸಾಗರವೇರ್ಹಿ ದ್ವಾದಶ ಯೋಜನೇ ಉಭಯ ಗಂಗಾ ತೀರಿಚ್. ಐಸೇ ತೇಚ್ ಗಂಗಾತಟ ಮಹಾರಾಷ್ಟ್ರೀಚ್ ವಸಿಜೇ ಪುಣ್ಯಾತನ. ತಿಯೇ ಮಹಾರಾಷ್ಟ್ರೀಚ್ ಗಂಗಾತೀರೀ ಮಹಂತು. ತೇಥ ಸದಾಚ್ ಈಶ್ವರಾವತಾರ ಕ್ರಿಡತು.

ದೇಶ ಮ್ಹಣಿಜೇ ಖಂಡಮಂಡಳ. ಜೈಸೆ ಫಲಟಣಾ ಪಾಸೋನಿ ಮರ್‍ಹಾಟೀ ಭಾಷಾ ಜೇಉತುಲಾಚ್ ಠಾಈಚ್ ವರ್ತೇಇಕ್ ತೇ ಏಕಮಂಡಲ. ತಯಾಸಿ ಉತ್ತರೇ ಬಾಲೇಘಾಟಾಚಾ ಸೇವಟ ಅಸೇ. ಐಸೆ ಏಕ ಖಂಡಮಂಡಳ. ಮಗ ಉಭಯ ಗಂಗಾತೀರ ತೇಹೀ ಏಕ ಖಂಡಮಂಡಳ. ಆನ ತಯಾ ಪಾಸೌನಿ ಮೇಘಂಕರ ಘಾಟಿ ತೇಇಕ್ ಏಕ ಮಂಡಳ. ತಯಾ ಪಾಸೌನಿ ಆವಘೇ ವರಾಡ ತೇಇಕ್ ಹಿ ಏಕ ಮಂಡಲ. ಪರ ಅಘವೀಚಿ ಮಿಳೌನಿ ಮಹಾರಾಷ್ಟ್ರಚಿ ಬೋಲಿಜೇ ಕಿಂಚಿತ್ ಕಿಂಚಿತ್ ಭಾಷೇಚಾ ಪಾಲಟ ಆಸೇ. ಹಣೌನಿ ಖಂಡಮಂಡಳೇ ಮ್ಹಣಾವೀಚ್. ಮಗ ಐಲೇ ಮಂಡಳೀಚಾ ಪೈಲಾ ಮಂಡಳಾಸಿ ಜಾಪಿ. ಆನ ಪೈಲೇ ಮಂಡಳಿಂಚಾ ಐಲಾಸಿ ಏ. ತಯಾ ಪುರುಷಾಚೀ ತೇಚಿ ಏವಟ ಜಾಣವೇ.

ಪಶ್ಚಿಮಕ್ಕೆ ತ್ರಿಂಬಕ. ಪೂರ್ವಕ್ಕೆ ಸಮುದ್ರದವರೆಗೆ ಗಂಗಾ (ಗೋದಾವರಿ) ನದಿಯ ಎರಡೂ ದಂಡೆಗೆ ಹನ್ನೆರಡು ಯೋಜನೆ ಹೀಗೆ ಗಂಗಾ (ಗೋದಾವರಿ) ದಡದಲ್ಲಿ ಪುಣ್ಯಾತನ ವಾಸವಾಗಿದೆ. ಆ ಮಹಾರಾಷ್ಟ್ರದಲ್ಲಿ ಗಂಗಾ (ಗೋದಾವರಿ) ತೀರದಲ್ಲಿ ಮಹಂತರು. ಅಲ್ಲಿ ಸದಾಕಾಲವೂ ಈಶ್ವರಾವತಾರದ ಕ್ರೀಡೆ.

ದೇಶವೆಂದರೆ ಖಂಡಮಂಡಳ. ಫಲಟಣದಿಂದ ದಕ್ಷಿಣಕ್ಕೆ ಎಲ್ಲಿಯವರೆಗೆ ಮರಾಠಿ ಭಾಷೆ ಇದೆಯೋ ಅದು ಒಂದು ಮಂಡಳ. ಅದಕ್ಕೆ ಬಾಲೇಘಾಟ ಉತ್ತರದ ಸೀಮೆ. ಹೀಗೆ ಒಂದು ಖಂಡಮಂಡಳ. ಗಂಗಾ (ಗೋದಾವರಿ) ನದಿಯ ಉಭಯ ತೀರಗಳು, ಅದೂ ಒಂದು ಖಂಡಮಂಡಳ ಹಾಗೂ ಅಲ್ಲಿಂದ ಮೇಘಂಕರ ಘಾಟಿ ಒಂದು ಮಂಡಳ. ಅಲ್ಲಿಂದ ಇಡೀ ವರ್‍ಹಾಡ. ಅದು ಒಂದು ಮಂಡಳ. ಇವೆಲ್ಲವನ್ನೂ ಕೂಡಾ ಮಹಾರಾಷ್ಟ್ರವೆಂದೇ ಅನ್ನುತ್ತಾರೆ. ಅಲ್ಪಸ್ವಲ್ಪ ಭಾಷೆಯ ಭೇದವಿರುವುದರಿಂದ ಖಂಡಮಂಡಳವೆನ್ನಬೇಕು. ಬಳಿಕ ಈ ಕಡೆ ಮಂಡಳಿಯವ ಆ ಕಡೆಯ ಮಂಡಳಕ್ಕೆ ಹೋಗುತ್ತಾನೆ. ಆ ಕಡೆಯ ಮಂಡಳದವ ಈ ಕಡೆ ಬರುತ್ತಾನೆ. ಅವರದು ಅದೇ ಸೀಮೆ ಎನ್ನಬೇಕು.

ಇದರ ಅರ್ಥ ಇಷ್ಟೆ. ಕನ್ನಡ ಅರಸರು ಗೋದಾವರಿಯವರೆಗೆ ವಿಜಯಯಾತ್ರೆ ಮಾಡಿ ನೂರಾರು ವರ್ಷ ರಾಜ್ಯವಾಳಿದರೂ ನೀರಾ - ಗೋದಾವರಿಯ ನಡುವಿನ ಭಾಗದಲ್ಲಿ ಜನ ಮರಾಠಿಯೆನ್ನುವ ಭಾಷೆ ಬಳಸುತ್ತಿದ್ದರು. ಆ ಪ್ರದೇಶಕ್ಕೆ ಅವರು ಮಹಾರಾಷ್ಟ್ರವೆಂದೂ ಅನ್ನುತ್ತಿದ್ದರು.

ಮಹಾರಾಷ್ಟ್ರದ ಮೂಲ ಎಂಬ ಕೃತಿಯಲ್ಲಿ ಶಂಬಾ ಜೋಶಿ ಅವರು ಹೀಗೆ ಅಭಿಪ್ರಾಯ ಪಟ್ಟಿದ್ದಾರೆ.

''ಆದಿ ಕವಿಯೆನಿಸಿದ ಜ್ಞಾನೇಶ್ವರನಾಗಲಿ, ಅವನಿಂದಲೂ ಮುಂಚಿನ ಮಹಾನುಭಾವ ಪಂಥದವರಾಗಲಿ ತಪ್ಪಿ ಒಮ್ಮೆಯಾದರೂ ಮರಾಠಿ ಎಂಬ ಪದವನ್ನು ಪ್ರಯೋಗಿಸಿಲ್ಲ; ಅವರೆಲ್ಲ ಬರೆದಿರುವುದು ಮರ್‍ಹಾಟಿ ಎಂದು. ಸುಮಾರು 13ನೆಯ ಶತಮಾನದ ಹಿಂದೆ ಮರಾಠಿ ಎಂಬ ಪದವು ದೊರೆಯುವುದೇ ಅಸಾಧ್ಯ. ಅವರ ಪ್ರಾಚೀನ ಸಾಹಿತ್ಯದಲ್ಲೆಲ್ಲ ಇದ್ದುದು ಮರ್‍ಹಾಟಿ ಎಂದು ಮಾತ್ರ. ಮರ್‍ಹಾಟಿ ಭಾಷೆಯ ಮಾತೃಭೂಮಿಯು ವರ್‍ಹಾಡವೆಂಬ ಬಗ್ಗೆ ಮಹಾರಾಷ್ಟ್ರದಲ್ಲಿ ಮತಭೇದವೆ ಇಲ್ಲ. ಆದುದರಿಂದ ವರ್‍ಹಾಟದ ಹೆಸರು ಒಂದು ಕಾಲಕ್ಕೆ ಮರ್‍ಹಾಟವೆಂದಾಗಿರಬೇಕು. ಶ್ರೀ ಜೋಶಿ ಹಾಗೂ ಶ್ರೀ ಭಿಡೆಯವರು ತಮ್ಮ ಗ್ರಂಥಗಳಲ್ಲಿ ವರ್‍ಹಾಡ ವಿದರ್ಭದಲ್ಲಿಯೇ ಮರಾಠಿಯ ಮೂಲವು ದೊರೆಯುತ್ತದೆ ಎಂದು ಸೂಚ್ಯವಾಗಿ ಹೇಳಿದ್ದಾರೆ. ಪುಟ (25-26) ಅಲ್ಲದೇ ಮಹಾರಾಷ್ಟ್ರದ ವ್ಯಾಪ್ತಿಯನ್ನು ಹೀಗೆ ಗುರುತಿಸಿದ್ದಾರೆ.

ಮೊದಲು ಮಹಾರಾಷ್ಟ್ರವು ವರ್‍ಹಾಡವನ್ನು ಬಿಟ್ಟು ಹೊರಗೆ ಇನ್ನೂ ಹಬ್ಬಿಕೊಂಡಿಲ್ಲ. ಆ ಕಾಲದಲ್ಲಿ

No. TECH/47-202/MBI/2003-05
Date of Posting : 10-06-2005

ವರ್ಹಾಡವೂ ಮಹಾರಾಷ್ಟ್ರವೂ ಬೇರೆ ಬೇರೆಯಿದ್ದಿಲ್ಲ. ರತ್ನ ಕೋಶದಲ್ಲಿ Maharashtra Vidarbha, Tapitata and the Narmadatata desh (i.e. the countries on either side of those rivers) ಎಂದು ಭಂಡಾರಕರರು ತಮ್ಮ ದಕ್ಷಿಣದ ಪ್ರಾಚೀನ ಇತಿಹಾಸದಲ್ಲಿ ಕೊಟ್ಟಿದ್ದಾರೆ. ಮಹಾರಾಷ್ಟ್ರರೆಂದು ಮುಂದೆ ಹೆಸರುಗೊಂಡ ಜನಾಂಗದವರು ಮೊಟ್ಟಮೊದಲಿಗೆ ನೆಲಸಿದುದು ವರ್ಹಾಡದಲ್ಲಿಯೇ. ಡಾ. ಭಂಡಾರಕರರು ಮಹಾರಾಷ್ಟ್ರದ ಸ್ಥಾನ ನಿರ್ಣಯ ಮಾಡುತ್ತಾ ಇವರ ಮೊಟ್ಟಮೊದಲಿನ ವಸತಿಯ ವಿದರ್ಭ ಅಥವಾ ವರ್ಹಾಡದಲ್ಲಿಯೆ ಎಂಬುದನ್ನು ಸ್ಪಷ್ಟವಾಗಿ ಒಪ್ಪಿಕೊಂಡಿದ್ದಾರೆ. (They first settled in Vidarbha or Berar). ವರ್ಹಾಟವೇ ಪ್ರಥಮ ಮಹಾರಾಷ್ಟ್ರವೆಂದು ಡಾ. ಕೇತಕರ ಅವರು (ಮಹಾರಾಷ್ಟ್ರ ಸಾಂಸ್ಕೃತಿಕ ಇತಿಹಾಸ ಪುಟ 7 ಮತ್ತು 15) ಅಭಿಪ್ರಾಯ ಪಟ್ಟಿದ್ದಾರೆ. ಮರ್ಹಾಠಿಗಳು ತಮ್ಮ ಮೂಲಸ್ಥಾನವಾದ ವರ್ಹಾಟದಿಂದ ಹೊರಟು ಗೋದಾವರಿ ಕೃಷ್ಣಾ ತೀರಗಳ ಕಡೆಗೆ ಹೋಗಿ ನಿಂತು ಒಕ್ಕಲಾಗುವ ಮೊದಲು ಆಗಿನ ಮಹಾರಾಷ್ಟ್ರವೆಂಬುದು ಮೇಲೆಯೇ ಕಾಣುತ್ತದೆ' ಎಂದಿದ್ದಾರೆ (ಅದೇ ಪುಟ 38)

**ಮಹಾರಾಷ್ಟ್ರದ ಪ್ರಾಚೀನತೆಯ ಬಗೆಗಿನ ಕೆಲವು ಉಲ್ಲೇಖಗಳು**

1. ಎರಡನೆಯ ಪುಲಕೇಶಿಯ ಐಹೊಳೆ ಶಾಸನದಲ್ಲಿ (ಕಾಲ 7ನೇ ಶತಮಾನ) ''ಆಗಮತ್ ಅಧಿಪತಿತ್ವಂ ಯೋ ಮಹಾರಾಷ್ಟ್ರಕಾಣಾಂ ನವನವತಿ ಸಹಸ್ರ ಗ್ರಾಮ ಭಾಜಾಂ ತ್ರಯಾಣಾಂ
2. ರಾಜಶೇಖರ ಕವಿಯ (10ನೇ ಶತಮಾನ) ಬಾಲ ರಾಮಾಯಣ ಕೃತಿಯಲ್ಲಿ ಮಹಾರಾಷ್ಟ್ರ ವಿಷಯ ಹಾಗೂ ವಿದರ್ಭ ವಿಷಯದ ಪ್ರಸ್ತಾಪ ಬಂದಿದೆ.
3. ಕ್ರಿ.ಶ. 1190ರಲ್ಲಿ ರಚಿತವಾದ ಮಹಾನುಭಾವ ಪಂಥದ ಲೀಲಾ ಚರಿತ್ರೆಯಲ್ಲಿ ''ಸಾರಿ ಲಕ್ಷ ಮಹಾರಾಷ್ಟ್ರ ತೇಹಿ ವಸವಿಲೆ ಗಂಗಾ ತೀರೂ, ತ್ರ್ಯಂಬ ಕೂವ್ವೇರಿ'' ಎಂದಿದೆ.
4. 10ನೇ ಶತಮಾನದ ಧನಪಾಲ ಭವಿಷ್ಯಯತ್ತ ಕಹಾದಲ್ಲಿ ''ಮರು ವೇಯಂಗ ಕುಂಗ ವೇರಾಡ ಗುಜ್ಜರ ಗೋಹ ಲಾಡ ಕನ್ನಾಡ'' ಎಂಬ ಉಲ್ಲೇಖವಿದ್ದು
ಇಲ್ಲಿ ವರಾಡ ಮರ್ಹಾಠವೇ ಇದ್ದಿರಬೇಕು.
5. ಸು.ಕ್ರಿ.ಶ. 778ರ ಉದ್ಯೋತನ ಸೂರಿಯ ಪ್ರಾಕೃತ ಕೃತಿ.
**'ಕುವಲಯ ಮಾಲಾ ಕಹಾ'ದಲ್ಲಿ**
'ಲಾಡಾ ಕಣ್ಣಾಡಾ ವಿಯ
ಮಾಲವಿಯ ಕಣ್ಣುಜ್ಜ ಗೋಲ್ಲಯಾ ಕೇ ಇ
ಮರಹಟ್ಟ ಸೋರಟ್ಟಾ
ಢಕ್ಕಾ ಸಿರ ಅಂತ ಸೇಂದವಯಾ'' ಎಂದಿದೆ.
6. ಪಂಪ ಕವಿಯ ಆದಿಪುರಾಣದಲ್ಲಿ (ಕಾಲ 941) ಮಹಾರಾಷ್ಟ್ರ ವಿಷಯದ ಉಲ್ಲೇಖವಿದ್ದರೆ ಇಂದಿನ ಮಹಾರಾಷ್ಟ್ರದ ಕೊಲ್ಹಾಪುರದಲ್ಲಿದ್ದ ಕವಿ ಕರ್ಣ ಪಾರ್ಯ ವಿರಚಿತ (ಕಾಲಸು. ಕ್ರಿ.ಶ. 1160) ನೇಮಿನಾಥ ಪುರಾಣದಲ್ಲಿ ಮಹಾರಾಷ್ಟ್ರ ದೇಶದ ಪ್ರಸ್ತಾಪ ಮಾಡಿದ್ದಾನೆ.
7. ಮೂರನೇ ಸೋಮೇಶ್ವರನ ಮಾನಸೋಲ್ಲಾಸ ಕೃತಿಯಲ್ಲಿ ''ಸಾ ಕರ್ನಾಟ ವರಾಟೀ ಸ್ಯಾತ್ ಈಷತ್ ಸಂಪ್ರತಿ ಪಾಟಿಕಾ'' ಎಂದಿದೆ.
ಮಹಾರಾಷ್ಟ್ರವನ್ನು ವ ರಾ ಟೀ ಎಂದು ಕರೆದುದನ್ನು ನಾವು ಕಾಣಬಹುದು.

(ಮುಂದುವರಿಯವುದು)

## ದಿಲ್ಲಿಯಲ್ಲಿ ಎನ್ಕೆಗೆ ಶ್ರದ್ಧಾಂಜಲಿ

ಧಾರವಾಡದಲ್ಲಿ ನಿಧನರಾದ ಕನಡದ ಖ್ಯಾತ ಸಾಹಿತಿ ಎನ್.ಕೆ. ಕುಲಕರ್ಣಿ ಅವರಿಗೆ 'ದೆಹಲಿ ಕನ್ನಡಿಗ' ಪತ್ರಿಕೆ ಮೇ 4ರಂದು ದಿಲ್ಲಿಯಲ್ಲಿ ಏರ್ಪಡಿಸಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ಸಾಹಿತಿಗಳು, ಕಲಾವಿದರು, ಪ್ರಾಧ್ಯಾಪಕರು, ಅಧಿಕಾರಿ ವರ್ಗದವರು ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಿದರು.

'ದೆಹಲಿ ಕನ್ನಡಿಗ' ಪತ್ರಿಕೆ ಸಂಪಾದಕ ಬಾ. ಸಾಮಗ ಅವರು ಎನ್ಕೆ, ನಾನಿ ಕಾಕಾ ಎಂದೇ ಚಿರಪರಿಚಿತರಾಗಿದ್ದ ನಾರಾಯಣ ಕೃಷ್ಣರಾವ್ ಕುಲಕರ್ಣಿ ಅವರು ಕನ್ನಡ, ಸಂಸ್ಕೃತ, ಮರಾಠಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಸಮಾನ ಪಾಂಡಿತ್ಯಪೂರ್ಣರಾಗಿದ್ದು ಕನ್ನಡದಲ್ಲಿ 14 ಏಕಾಂಕ ನಾಟಕಗಳು, 9 ಕಾದಂಬರಿಗಳು, 5 ಹರಟೆ ಗ್ರಂಥಗಳು, 31 ಜೀವನ ಚರಿತ್ರೆ ಬರೆದು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದರು, ಎನ್ಕೆ ಬರಹದಲ್ಲಿ ಬದುಕಿನ ನೈಜ ಚಿತ್ರಣವಿದ್ದು ಸಾಹಿತ್ಯ ಲೋಕದಲ್ಲಿ ಎನ್ಕೆ ತಮ್ಮದೇ ಛಾಪು ಮಂಡಿಸಿದ್ದ ರೆಂದರು. ಅವರನ್ನು ಕೇಂದ್ರ ರಾಜ್ಯ ಸಾಹಿತ್ಯ ಅಕಾಡೆಮಿಗಳ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿಗಳಿಂದ ಸನ್ಮಾನಿಸ ಲಾಗಿತ್ತೆಂದರು.

ವಿಮರ್ಶಕಿ ಶ್ರೀಮತಿ ಅನುಪಮ ಸತ್ಯಪ್ರಕಾಶ್ ಅವರು 46ರಿಂದ 71ರ ವರೆಗೆ ಆಕಾಶವಾಣಿಯಲ್ಲಿ ಸೇವೆ ಸಲ್ಲಿಸಿದ ಎನ್ಕೆ 76ರಲ್ಲಿ ಬರೆದ 'ದಲಿತ ದುಂದುಬಿ' ರೂಪಕಕ್ಕೆ ಆಕಾಶವಾಣಿಯ ರಾಷ್ಟ್ರೀಯ ಪ್ರಶಸ್ತಿ ಲಭಿಸಿತ್ತೆಂದರು. ಆಕಾಶವಾಣಿಯ ಕಾರ್ಯಕ್ರಮಗಳು ಜನಸಾಮಾನ್ಯರಿಗೂ ಮೆಚ್ಚಿಗೆಯಾಗುವಂತೆ ರೂಪಿಸಿದ ಎನ್ಕೆ ಬಹುಮುಖ ಪ್ರತಿಭಾವಂತರೆಂದರು.

ಇದೇ ಸಂದರ್ಭದಲ್ಲಿ ಎನ್ಕೆ ಅವರ ಪುಸ್ತಕ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

# ಸುತ್ತಮುತ್ತ

## ದಿಲ್ಲಿಯಲ್ಲಿ ಭೂಪಾಳಂ ಚಂದ್ರಶೇಖರಯ್ಯ ಜನ್ಮ ಶತಾಬ್ದಿ

ಅಪ್ರತಿಮ ರಾಷ್ಟ್ರಪ್ರೇಮಿ, ಸ್ವಾತಂತ್ರ್ಯ ಹೋರಾಟಗಾರ, ಸಾಹಿತಿ, ಪತ್ರಿಕೋದ್ಯಮಿ, ಪರಿಸರ ಸಂರಕ್ಷಕ, ಹಿರಿಯ ಮುತ್ಸದ್ದಿ ದಿವಂಗತ ಭೂಪಾಳಂ ಚಂದ್ರಶೇಖರಯ್ಯ ಅವರ ಜನ್ಮ ಶತಮಾನೋತ್ಸವವನ್ನು ದಿಲ್ಲಿಯಲ್ಲಿ ಮೇ 22ರಂದು 'ದೆಹಲಿ ಕನ್ನಡಿಗ' ಪತ್ರಿಕೆ ಆಶ್ರಯದಲ್ಲಿ ಕನ್ನಡ ಸಾಹಿತಿಗಳು, ಕಲಾವಿದರು, ಪ್ರಾಧ್ಯಾಪಕರು, ಬುದ್ಧಿಜೀವಿಗಳು, ಕನ್ನಡ ಕಾರ್ಯಕರ್ತರು, ಅಧಿಕಾರಿಗಳು ಅದ್ದೂರಿಯಿಂದ ಆಚರಿಸಿದರು.

ಶತಮಾನೋತ್ಸವವನ್ನು ಉದ್ಘಾಟಿಸಿದ 'ದೆಹಲಿ ಕನ್ನಡಿಗ' ಪತ್ರಿಕೆ ಸಂಪಾದಕ ಬಾ. ಸಾಮಗ ಅವರು ಮಲೆನಾಡಿನ ಅಭಿವೃದ್ಧಿಗೆ, ರೈತ ಕಾರ್ಮಿಕರ ಹಿತ ರಕ್ಷಣೆಗೆ ಸತತ ಹೋರಾಟ ನಡೆಸಿದ ಚಂದ್ರಶೇಖರಯ್ಯ ಅವರು 13 ವರ್ಷ ಕಾಲ ಪ್ರಜಾಪ್ರತಿನಿಧಿ ಸಭೆಗೆ ಸದಸ್ಯರಾಗಿ ಸೇವಾ ಕಾರ್ಯದಲ್ಲಿ ನಿರತರಾಗಿದ್ದ ರೆಂದರಲ್ಲದೆ ಹಿಂದೂ ಸಮಾಜದ ಸಂಘಟನೆಗೆ ಅವಿರತ ಶ್ರಮಿಸಿದ ಇವರು ಹಿಂದೂ-ಮುಸ್ಲಿಂ ಕೋಮು ಸೌಹಾರ್ದಕ್ಕೆ ಕಾರಣರಾಗಿದ್ದ ರೆಂದರು. 'ಮಲೆನಾಡು ವಾರ್ತೆ'ವಾರ ಪತ್ರಿಕೆ ಪ್ರಾರಂಭಿಸಿ ಮುನ್ನಡೆಸಿದ ಚಂದ್ರಶೇಖರಯ್ಯ ತಮ್ಮ ಬರಹದ ಮೂಲಕ ಜನಜಾಗೃತಿ ಮಾಡಿ ಪತ್ರಿಕೋದ್ಯಮಕ್ಕೆ ಕೀರ್ತಿ ತಂದರೆಂದರು.

ಪ್ರಾಧ್ಯಾಪಕಿ ಶ್ರೀಮತಿ ಸುಮಾ ಪ್ರಸಾದ್ ಅವರು ಕುವೆಂಪು ಅವರ ಆಪ್ತ ಸ್ನೇಹಿತರಾಗಿದ್ದ ಚಂದ್ರಶೇಖರಯ್ಯ ಕನ್ನಡ ಸಾಹಿತ್ಯ ಕೃತಿಗಳನ್ನು ರಚಿಸಿ ಸಾಹಿತ್ಯ ಸೇವೆ ಮಾಡಿದ್ದರೆಂದರಲ್ಲದೆ ದೀನ ದಲಿತರಿಗೆ, ಬಡ ವಿದ್ಯಾರ್ಥಿಗಳಿಗೆ ಸಹಾಯ ಮಾಡಿ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಲು ಶ್ರಮಿಸಿದ್ದರೆಂದರು.

ಅಧ್ಯಕ್ಷತೆ ವಹಿಸಿದ್ದ ಲೇಖಕಿ, ಪರಿಸರವಾದಿ ಡಾ. ಶಕುಂತಲಾ ದೇವೆಸರ್ ಅವರು ಹೊರನೋಟಕ್ಕೆ ಸಂಪ್ರದಾಯ ಶರಣರೆಂದು ಕಂಡರೂ ಚಂದ್ರಶೇಖರಯ್ಯ ಕ್ರಾಂತಿವಾದಿ, ವಿಶಾಲ ಮನಸ್ಸುಳ್ಳವರಾಗಿ ತುಂಗಭದ್ರಾ ಸಕ್ಕರೆ ಕಾರ್ಖಾನೆಯ ನಿರ್ಮಾಣಕ್ಕೂ ಕಾರಣರಾದ ರೆಂದರಲ್ಲದೆ ಕೊನೆಯ ಉಸಿರಿರುವವರೆಗೂ ಶಿವಮೊಗ್ಗೆಯ ಮಲೆನಾಡಿನ ಅಭಿವೃದ್ಧಿಗೆ ತಮ್ಮ ಎಲ್ಲಾ ಪ್ರಯತ್ನ ಮಾಡಿದ ಇವರ ಬದುಕಿನಿಂದ ಸ್ಫೂರ್ತಿ ಪಡೆದು ಕನ್ನಡಿಗರು ನಾಡಿನ ಪ್ರಗತಿಗೆ ಕಾರಣರಾಗ ಬೇಕೆಂದರು.

Edited, Printed & Published by M.A.N. Prasad, On behalf of the Mysore Association, Mumbai. Tel.: 2402 4647 ● Fax : 2401 0574
Email : karunadu@bom5.vsnl.net.in
Printed at Aarati Art Printers, Fort, Mumbai-400 001. " 2266 3361 / 2266 5938